ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 11
Issue - 12
Pages - 20
₹ - 12
December - 2013



## ಹೇಮಂತ

ಸೀಗೀ ಹುಣ್ಣಿಮೆ ಮುಂದೆ
ಸೋಗಿನ ಚಂದ್ರಮ
ಸಾಗಿಬರುವೊಲು ಬರುವ ಚಳಿಯಾಕೆ.
ಹೊನ್ನ ಸೇವಂತಿಗೆಯ
ಹೆರಳು ಬಂಗಾರದ
ಬೆಳ್ಳಿ ಸೇವಂತಿಗೆಯ ಬಳಿಯಾಕೆ.

ಮುಗಿಲಲ್ಲಾಡುವ
ಬಾವಿಲಿ ಮಲ್ಲಿಗೆ
ಕಿವಿಗೊಪ್ಪು ಓಲೆಕೊಪ್ಪು ಚಳತುಂಬ.
ಹೊಳೆಹೊಂಢದುಸಿರನ್ನೆ
ನಯವಾಗಿ ನೆಯ್ದಂಥ
ಮಂಜಿನ ಮೇಲ್ಸೆರಗು ಮೈತುಂಬ

▶▶ ದ.ರಾ.ಬೇಂದ್ರೆ

ಕ್ರಿಸ್ಮಸ್
ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 2640 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 545

ಅಧ್ಯಕ್ಷರ ನುಡಿ



# ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವಿಸ್ತರಣೆ ಕಾರ್ಯಗಳ ಚಿಂತನೆಗೆ ಸಹಕಾರಿಗಳ ಪ್ರತಿಕ್ರಿಯೆ ಅವಶ್ಯಕ

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಯ ದೃಷ್ಟಿಯಿಂದ ಸಂಯುಕ್ತ ಸಹಕಾರಿಯು ತನ್ನ ಕಾರ್ಯಚಟುವಟಿಕೆಗಳಲ್ಲಿ ಹಲವು ವಿಧವಾದ ವೈವಿಧ್ಯತೆಯನ್ನು ಅಳವಡಿಸುವುದು ಅಗತ್ಯವೆನಿಸಿದೆ. ಹಾಲಿ ನಡೆಸುತ್ತಿರುವ ಕಾರ್ಯಚಟುವಟಿಕೆಗಳ ಜೊತೆಗೆ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ, ಹೆಚ್ಚುವರಿಯಾಗಿ ಹಲವು ವಿಧವಾದ ಹೊಸ ಬಗೆಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚಿಂತನೆ ನಡೆಸುತ್ತಿದೆ. ಈ ಚಿಂತನೆಯ ಬಗ್ಗೆ ರಾಜ್ಯದ ಸೌಹಾರ್ದ ಸಹಕಾರಿಗಳು ಪ್ರತಿಕ್ರಿಯಿಸುವುದರ ಜೊತೆಗೆ ತಾವು ನೀಡುವ ಸಲಹೆಗಳನ್ನು ಸಂಯುಕ್ತ ಸಹಕಾರಿಯು ಸ್ವಾಗತಿಸುತ್ತದೆ. ಪ್ರತಿವರ್ಷದ ಕಾರ್ಯಚಟುವಟಿಕೆಗಳ ಜೊತೆಗೆ ಪ್ರಸ್ತುತ ವರ್ಷದಲ್ಲಿ ಸಂಯುಕ್ತ ಸಹಕಾರಿಯು, ಹೆಚ್ಚುವರಿಯಾಗಿ ಸದಸ್ಯರ ತರಬೇತಿ, ಮಹಿಳಾ ತರಬೇತಿ ಹಾಗೂ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವಿಷಯಾಧಾರಿತ 3 ದಿನಗಳ ತರಬೇತಿ ಕಾರ್ಯಕ್ರಮಮಗಳನ್ನು ಹೊಸದಾಗಿ ಪ್ರಾರಂಭಿಸಿದೆ.

ಅಂತರ್ಜಾಲದ ಮೂಲಕ ಕೆಲವು ಆಯ್ದ ವಿಷಯಗಳ ಬಗ್ಗೆ ಪಿಪಿಟಿ ಸಿದ್ಧಪಡಿಸಿ "ಇ–ಟ್ರೈನಿಂಗ್" ವ್ಯವಸ್ಥೆಯನ್ನು ಜಾರಿಗೊಳಿಸುವುದು, ಕೆಲವು ಆಯ್ದ ವಿಷಯಗಳಬಗ್ಗೆ ನುರಿತವರಿಂದ ಉಪನ್ಯಾಸಗಳ ಸಿ.ಡಿ.ಗಳನ್ನು ಸಿದ್ಧಪಡಿಸುವುದು, ತಯಾರುಮಾಡುವುದಕ್ಕಾಗಿ ಕ್ರಮವಿಡುವುದು, ವ್ಯವಹಾರದಲ್ಲಿ ಲಾಭಕತೆಯನ್ನು ಹೊಂದುವ ವಿಷಯಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ಇ–ಸ್ಟಾಂಪಿಂಗ್ ಮಾದರಿಯ ಆದಾಯ ಹೊಂದಬಹುದಾದ ಸೇವಾ ಸೌಲಭ್ಯಗಳನ್ನು ಪರಿಚಯಿಸುವುದು, ವ್ಯವಹಾರಿಕ ಸೌಲಭ್ಯದಾರರಾಗಿ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವ ಬಗ್ಗೆ ಯೋಜನೆಗಳನ್ನು ಸಿದ್ಧಪಡಿಸುವುದು, ವಿವಿಧ ವಿಷಯಗಳಲ್ಲಿ ಡಿಪ್ಲೋಮಾ ಅಥವಾ ಎಮ್.ಬಿ.ಎ. ಒದಗಿಸಬಹುದಾದ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿರುವ "ದೂರ ಶಿಕ್ಷಣ" ಅಥವಾ "ಅಂಚೆ ಶಿಕ್ಷಣ"ದ ವ್ಯವಸ್ಥೆಯನ್ನು ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗೆ ಒದಗಿಸುವುದು, ವಿವಿಧ ಕಾಯ್ದೆಗಳ ಮಾಹಿತಿ ಕೈಪಿಡಿ ಹಾಗೂ ಚುನಾವಣಾ ಕೈಪಿಡಿ ಹಾಗು ಇತರೆ ಕೈಪಿಡಿಗಳನ್ನು ಸಿದ್ಧಪಡಿಸುವುದು ಇತ್ಯಾದಿ ವಿಸ್ತರಣಾ ಕಾರ್ಯಗಳ ಬಗ್ಗೆ ಸಂಯುಕ್ತ ಸಹಕಾರಿಯು ಅನುಭವಿಗಳ ಜೊತೆಗೆ, ತಜ್ಞರುಗಳ ಜೊತೆಗೆ ಚರ್ಚಿಸಿದೆ. ಯೋಜನೆಗಳನ್ನು ಸಿದ್ಧಪಡಿಸುತ್ತಿದೆ. ಮುಂಬರುವ ದಿನಗಳಲ್ಲಿ ಈ ಯೋಜನೆಗಳನ್ನು ಜಾರಿಮಾಡುವ ಮುನ್ನ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿಪ್ರಾಯವೂ ಅಗತ್ಯವೆನಿಸಿದೆ. ತಾವುಗಳು ಪ್ರತಿಕ್ರಿಯಿಸುವಿರಾಗಿ ಆಶಿಸುತ್ತೇನೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿಯ ಪ್ರಯತ್ನಗಳಲ್ಲಿ ಸ್ಪಂದಿಸಿ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಿ.

"ಪ್ರತಿವರ್ಷದ ಕಾರ್ಯಚಟುವಟಿಕೆಗಳ ಜೊತೆಗೆ ಪ್ರಸ್ತುತ ವರ್ಷದಲ್ಲಿ ಸಂಯುಕ್ತ ಸಹಕಾರಿಯು, ಹೆಚ್ಚುವರಿಯಾಗಿ ಸದಸ್ಯರ ತರಬೇತಿ, ಮಹಿಳಾ ತರಬೇತಿ ಹಾಗೂ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವಿಷಯಾಧಾರಿತ 3 ದಿನಗಳ ತರಬೇತಿ ಕಾರ್ಯಕ್ರಮಮಗಳನ್ನು ಹೊಸದಾಗಿ ಪ್ರಾರಂಭಿಸಿದೆ."

**ಗುರುನಾಥ ಜ್ಯಾಂತಿಕರ**
ಅಧ್ಯಕ್ಷರು

# ಸಂಪಾದಕೀಯ



## ಸಹಕಾರ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಸೌಹಾರ್ದ ಸಹಕಾರಿಗಳು : ಸಹಕಾರಿಗಳಿಗೆ ಹೆಚ್ಚಿದ ಜವಾಬ್ದಾರಿ

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ 13ನೇ ವರ್ಷಗಳು. ಪಯಣದ ದಾರಿ ಸುಗಮವಾಗಿಲ್ಲವಾದರೂ ಬೆಳವಣಿಗೆಯ ವೇಗ ದಿನದಿಂದ ದಿನಕ್ಕೆ ಹೆಚ್ಚುತ್ತಲಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಸಾರ್ವಜನಿಕರಲ್ಲಿ, ಸಹಕಾರಿ ಮುಖಂಡರುಗಳಲ್ಲಿ, ಸರಕಾರದಲ್ಲಿ ಉತ್ತಮ ಭಾವನೆ ಹಾಗೂ ಸಕಾರಾತ್ಮಕ ಸ್ಪಂದನೆಗಳನ್ನು ಕಾಣಬಹುದಾಗಿದೆ. ಇದೊಂದು ಅತ್ಯಂತ ಪ್ರಮುಖ ಬೆಳವಣಿಗೆ. ಇದನ್ನು ಉಳಿಸುವುದು ಬೆಳೆಸುವುದು ನಮ್ಮ ನಿಮ್ಮೆಲ್ಲರ ಮಹತ್ವದ ಜವಾಬ್ದಾರಿ.

ನವೆಂಬರ 14 ರಿಂದ ನವೆಂಬರ್ 20ರವರೆಗೆ ರಾಜ್ಯದಲ್ಲಿ ಸಹಕಾರ ಚಳುವಳಿ ಪ್ರಗತಿಯ ಸಿಂಹಾವಲೋಕನ ಮಾಡುವ 60ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯನ್ನು ವಿವಿಧ ರಾಜ್ಯಮಟ್ಟದ ಸಹಕಾರಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ವಿವಿಧ ಸ್ಥಳಗಳಲ್ಲಿ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು ಯಶಸ್ವಿಯಾಗಿ ಆಚರಿಸಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನೇತಾರನಾಗಿ ಸಂಯುಕ್ತ ಸಹಕಾರಿಯು ಕೆಲವು ಪ್ರಮುಖ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಜೊತೆಗೆ ದಿನಾಂಕ : 18/11/2013ರಂದು ಕೋಲಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಲಾಗಿದೆ. ಪ್ರಮುಖ ಪಾತ್ರವನ್ನು ನಿರ್ವಹಿಸಿ ಎಲ್ಲರ ಗಮನ ಸೆಳೆಯುವ ಪ್ರಯತ್ನ ನಡೆದಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಪ್ರಗತಿಯ ಬಗ್ಗೆ ಸಾಕಷ್ಟು ಪ್ರಚಾರಕ್ಕೆ ಕ್ರಮವಿಡಲಾಗಿದೆ. ಈ ಎಲ್ಲ ಪ್ರಯತ್ನಗಳ ಪರಿಣಾಮವಾಗಿ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಸಂಯುಕ್ತ ಸಹಕಾರಿಯನ್ನು ಸಹಕಾರ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಪರಿಗಣಿಸಲಾಗಿದೆ.

97ನೇ ಸಂವಿಧಾನ ತಿದ್ದುಪಡಿಯಾದಾರಿತ ರಾಜ್ಯದ ಎರಡು ಕಾಯ್ದೆಗಳಿಗೂ ಅವಶ್ಯಕ ತಿದ್ದುಪಡಿಗಳನ್ನು ರಾಜ್ಯ ಸರಕಾರ ಜಾರಿಮಾಡಿದೆ. 1959ರ ಕಾಯ್ದೆಗೂ ಸಾಕಷ್ಟು ಸ್ವಾಯತ್ತತೆಯನ್ನು ಕಲ್ಪಿಸಲಾಗಿದೆ. ಈ ಕಾರಣದಿಂದಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಕುಂಠಿತವಾಗಬಾರದು. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಪಾರದರ್ಶಕತೆ ಹಾಗೂ ತಾಂತ್ರಿಕತೆಯನ್ನು ಅಳವಡಿಸಿಕೊಂಡು ವಿಭಿನ್ನತೆ ಹಾಗೂ ವೈಶಿಷ್ಠತೆ ಗಳನ್ನು ಹೆಚ್ಚಿಸಿಕೊಳ್ಳಲು ಕ್ರಮವಿಡಬೇಕು. ಪರಿಸರದಲ್ಲಿರುವ ಎಲ್ಲ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯ ಸಾರ್ವಜನಿಕರ ಸರಕಾರದ ಹಾಗೂ ಸಹಕಾರಿಗಳ ಮೆಚ್ಚುಗೆ ಪಡೆಯುವಂತಿರಬೇಕು. ಹೀಗಾಗಿ ಸೌಹಾರ್ದ ಸಹಕಾರಿಗಳು ಬಹಳ ಎಚ್ಚರಿಕೆಯ ನಡೆಯನ್ನು ಅನುಸರಿಸುವುದು ಅವಶ್ಯಕ.

### ಒಳ ಪುಟಗಳಲ್ಲಿ...


60ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಕೋಲಾರದಲ್ಲಿ ತೆರಿಗೆ ಮತ್ತು ಕಾಯ್ದೆಗಳ ದಿನಾಚರಣೆ ........ 4

ಸಹಕಾರ ಸಪ್ತಾಹ : ಸಹಕಾರ ಕ್ಷೇತ್ರದ ಅಭಿವೃದ್ಧಿ ಸಾಧಿಸಲು ಚಿಂತನೆಗಾಗಿ ಒಂದು ಉತ್ತಮ ವೇದಿಕೆ – ಶ್ರೀ ಗುರುನಾಥ ಜ್ಯಾಂತಿಕರ ........ 5

8ನೇ ಅಂತರ ರಾಷ್ಟ್ರೀಯ ಸಹಕಾರ ಅಧ್ಯಯನ ಹಾಗೂ ಸಂಶೋಧನಾ ಸಮ್ಮೇಳನದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಮನ್ನಣೆ ಸಾಧನೆಗಳ ಬಗ್ಗೆ ಮೆಚ್ಚುಗೆ ........ 6

ಎಲ್ಲಾ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಈ ಸಹಕಾರ ಆದರೆ ಮಮಕಾರದ ಕೊರತೆ – ಶ್ರೀವಾಸ್ತವ ........ 7

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಬೆಂಗಳೂರಿನ ಜಯನಗರದಲ್ಲಿ 9ನೇ ಶಾಖೆ ........ 8

ಜನವರಿ 1 ರಂದು ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಕರೆ ... 9

ಇ–ಸ್ಟಾಂಪಿಂಗ್ ತರಬೇತಿಗಳು; ಮಾದರಿ ವ್ಯವಸ್ಥೆ – ಜಯಾನಂದ ಜಾಧವ ........ 10

ಇ–ಸ್ಟಾಂಪಿಂಗ್ ಪದ್ಧತಿಯಿಂದಾಗಿ ಸರಕಾರದ ಆದಾಯದ ಸೋರಿಕೆ ಕಡಿಮೆಯಾಗಿದೆ – ಶ್ರೀ ಎಮ್.ಬಿ. ಕಲಾಲ ........ 11

ಸೌಹಾರ್ದ ಸಹಕಾರಿ ಯಶಸ್ಸಿನಿಂದಾಗಿ ಸಹಕಾರ ಕ್ಷೇತ್ರಕ್ಕೆ ಬಲ ಬಂದಿದೆ – ಶ್ರೀ ಎಂ.ಜಿ.ಪಾಟೀಲ ........ 12

ಸೌಹಾರ್ದ ಸಹಕಾರಿ ಕಾಯ್ದೆ ಮಾದರಿ ಕಾಯ್ದೆಯಾಗಿದೆ – ಗುರುನಾಥ ಜ್ಯಾಂತಿಕರ ........ 13

ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ ..... 14

ಕತ್ತಲ ಕಳೆದು ಬದುಕು ಬೆಳಗಿದ ಸೌರ ಶಕ್ತಿ ........ 15

ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ – ನಿರ್ಧರಿತ ಪ್ರಕರಣಗಳು ಮತ್ತು ಅವುಗಳ ವಿಶ್ಲೇಷಣೆ ..... 17

## 60ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಕೋಲಾರದಲ್ಲಿ ತೆರಿಗೆ ಮತ್ತು ಕಾಯ್ದೆಗಳ ದಿನಾಚರಣೆ

### ಸೌಹಾರ್ದ ಸಹಕಾರಿ ಕಾಯ್ದೆಗೆ ಶೀಘ್ರದಲ್ಲಿ ತಿದ್ದುಪಡಿ, ಅಸೋಸಿಯೇಟ್ ಸದಸ್ಯತ್ವಕ್ಕೆ ಅವಕಾಶ – ಸಹಕಾರ ಸಚಿವ ಶ್ರೀ ಮಹದೇವ ಪ್ರಸಾದ್



ಸಹಕಾರ ಸಚಿವ ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ ಅವರಿಂದ ಕಾರ್ಯಕ್ರಮ ಉದ್ಘಾಟನೆ.



ಮಾಜಿ ವಿಧಾನ ಸಭಾಧ್ಯಕ್ಷ ಹಾಗೂ ಶಾಸಕ ಶ್ರೀ ರಮೇಶಕುಮಾರ ರವರಿಂದ ಸ್ವಾಭಿಮಾನಿ ಸಹಕಾರಿ ವಿಶೇಷ ಸಂಚಿಕೆ ಬಿಡುಗಡೆ

60ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 18/11/2013 ರಂದು ಕೋಲಾರದ ಟಿ.ಚೆನ್ನಯ್ಯ ರಂಗಮಂದಿರದಲ್ಲಿ ತೆರಿಗೆ ಮತ್ತು ಕಾಯ್ದೆಗಳ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಹಕಾರ ಸಚಿವ ಶ್ರೀ ಹೆಚ್.ಎಸ್.ಮಹದೇವ ಪ್ರಸಾದರವರು ಸಹಕಾರ ಕ್ಷೇತ್ರದಲ್ಲಿ ಸಾಮಾನ್ಯ ಸದಸ್ಯರ ಅಭಿವೃದ್ಧಿಗೆ ಹೆಚ್ಚು ಗಮನ ಹರಿಸಬೇಕು ಈ ಬಾರಿ ಸರ್ಕಾರವು ಶೇಕಡಾ 25% ಹೊಸ ಸದಸ್ಯರಿಗೆ ಸಾಲ ನೀಡುವಂತೆ ಕ್ರಮವಿಡಲು ಮುಂದಾಗಿದೆ.

ಈ ಬಾರಿ 7900 ಕೋಟಿ ರೂಗಳ ಸಾಲ ನೀಡಲಾಗುತ್ತಿದೆ. ಯಶಸ್ವಿನಿ ಆರೋಗ್ಯ ಯೋಜನೆಯನ್ನು ನಗರ ಪ್ರದೇಶದವರಿಗೂ ಇದೇ ಫೆಬ್ರವರಿ 1 ರಿಂದ ಜಾರಿಗೊಳಿಸಲಾಗುತ್ತಿದೆ. ಸಹಕಾರ ಕ್ಷೇತ್ರ ನಿಂತ ನೀರಾಗಬಾರದು. ಕೃಷಿಗೆ ಬೆಲೆ ನಿಗದಿಮಾಡುವ ಕೃಷಿ ಬೆಲೆ ಆಯೋಗವನ್ನು ರಚಿಸಲು ಸಂಪುಟ ತೀರ್ಮಾನವಾಗಿದೆ. ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯನ್ನು ತಿದ್ದುಪಡಿಮಾಡಿ ಸಹ ಸದಸ್ಯತ್ವಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ತಿಳಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

### ಸಹಕಾರ ಕ್ಷೇತ್ರಕ್ಕೆ ಹೊಸಬರನ್ನು ಕರೆತನ್ನಿ; ಎಲ್ಲರಿಗೂ ಸೌಲಭ್ಯ ವಿಸ್ತರಿಸಿ - ಶ್ರೀ ರಮೇಶಕುಮಾರ

ಮಾಜಿ ವಿಧಾನ ಸಭಾಧ್ಯಕ್ಷ ಹಾಗೂ ಹಾಲಿ ಶ್ರೀನಿವಾಸಪುರ ಶಾಸಕ ಶ್ರೀ ರಮೇಶ ಕುಮಾರರವರು ಸ್ವಾಭಿಮಾನಿ ಸಹಕಾರಿಯ ವಿಶೇಷ ಸಂಚಿಕೆಯನ್ನು ಬಿಡುಗಡೆಮಾಡಿ, ಸಹಕಾರ ಚಳುವಳಿ ಸಾಮಾನ್ಯ ಜನರ ಚಳುವಳಿಯಾಗಬೇಕು ಮತ್ತು ಸಹಕಾರಿಗಳು ಹಾಗೂ ಸಹಕಾರಿ ಸಂಸ್ಥೆಗಳು ಸ್ವಾಭಿಮಾನಿಗಳಾಗಬೇಕೆಂದು ಕರೆ ನೀಡಿದರು. ಶ್ರೀ ಸಾಮಾನ್ಯರಿಗೆ ಇದರ ಉಪಯೋಗವಾಗಬೇಕು. ಮತ್ತೆ ಮತ್ತೆ ಕೊಟ್ಟವರಿಗೆ ಸಾಲ ಕೊಡುವುದಾಗಬೇಕು. ಹೆಚ್ಚು ಹೆಚ್ಚು ಜನರನ್ನು ಸಹಕಾರಿ ಕ್ಷೇತ್ರದಲ್ಲಿ ತರುವ ಪ್ರಯತ್ನವಾಗಬೇಕು ಎಂದರು.



ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ ಅವರಿಗೆ ಸಹಕಾರ ಸಚಿವ ಶ್ರೀ ಮಹದೇವ ಪ್ರಸಾದರವರಿಂದ ಸನ್ಮಾನ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಅರುಣ ಶಹಾಪುರರವರಿಗೆ ಕೋಲಾರ ಜಿಲ್ಲಾ ಯೂನಿಯನ್ ಅಧ್ಯಕ್ಷ ಶ್ರೀ ಕೃಷ್ಣಾರೆಡ್ಡಿಯವರಿಂದ ಸನ್ಮಾನ.

# ಸಹಕಾರ ಸಪ್ತಾಹ : ಸಹಕಾರ ಕ್ಷೇತ್ರದ ಅಭಿವೃದ್ಧಿ ಚಿಂತನೆಗಾಗಿ ಉತ್ತಮ ವೇದಿಕೆ - ಶ್ರೀ ಗುರುನಾಥ ಜ್ಯಾಂತಿಕರ

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಮಾತನಾಡಿ ಸಹಕಾರ ಸಪ್ತಾಹ ಸಹಕಾರ ಕ್ಷೇತ್ರದ ಅಭಿವೃದ್ಧಿ ಸಾಧಿಸಲು ಚಿಂತನೆಗಳನ್ನು ಮಾಡಲು ಒಂದು ಉತ್ತಮ ವೇದಿಕೆಯಾಗಿದೆ. ರಾಜ್ಯದ ಲಕ್ಷಾಂತರ ರೈತರಿಗೆ ದೀನ ದಲಿತರಿಗೆ ಬಡವರಿಗೆ ಸೇವೆ ಸಲ್ಲಿಸುತ್ತಿರುವ ಈ ಸಹಕಾರ ಕ್ಷೇತ್ರ ಬಲಿಷ್ಠವಾಗಿ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿ ಸಹಕಾರ ಕ್ಷೇತ್ರ ಅಭಿವೃದ್ಧಿಯಲ್ಲಿ ಸಹಕಾರಿಗಳಿಗೆ ಸ್ವಾಯತ್ತತೆ ಒಂದು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಬಂದು 13 ವರ್ಷಗಳಾಗಿದ್ದು, ಈ ಕ್ಷೇತ್ರದಲ್ಲಿ ಸಹಕಾರಿಗಳಿಗೆ ಸ್ವಾಯತ್ತತೆ ಹಾಗೂ ಸ್ವಯಂ ನಿಯಂತ್ರಣ ಹಾಗೂ ಸ್ವಯಂ ಆಡಳಿತದ ಅವಕಾಶವಿರುವುರಿಂದ ಈ ಕ್ಷೇತ್ರದ ಪ್ರಗತಿ ವೇಗದಲ್ಲಿದೆ ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿ ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೆಗೌಡರವರು ವಹಿಸಿದ್ದರು. ರಾಜ್ಯದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಸಹಕಾರ ಸಪ್ತಾಹದ ಅಚರಣೆಯ ಅವಧಿಯಲ್ಲಿ ಅನೇಕ ವಿಚಾರಗಳ ಬಗ್ಗೆ ಚಿಂತನ ಮಂಥನಗಳು ನಡೆಯುತ್ತಿವೆ. ಸಹಕಾರ ಕ್ಷೇತ್ರದಸಾಧನೆಗಳ, ಸವಾಲುಗಳ ಹಾಗೂ ಅವಕಾಶಗಳ ಬಗ್ಗೆ ವ್ಯಾಪಕ ಚರ್ಚೆನಡೆದು ಅಭಿವೃದ್ಧಿಗೆ ಪೂರಕವಾಗುತ್ತದೆ ಅನೇಕ ಬಾರಿ ಸರ್ಕಾರದ ಹಲವಾರು ಯೋಜನೆಗಳು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಮಾರಕವಾಗುತ್ತವೆ ಎಂದು ಸರ್ಕಾರಗಳ ಸಾಲ ಮನ್ನಾ ಯೋಜನೆಗಳನ್ನು ಉದಾಹರಿಸಿ ಹೇಳಿದರು ಎಂದು ತಿಳಿಸಿದರು. ಪ್ರಾರಂಭದಲ್ಲಿ ಕೋಲಾರ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಪಿ.ಎನ್.ಕೃಷ್ಣಾರೆಡ್ಡಿಯವರು ಸ್ವಾಗತಿಸಿದರು. ಶ್ರೀ ಹೋಳಲಿ ಪ್ರಕಾಶರವರು ಮನವಿ ಸಲ್ಲಿಸಿದರು.

ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ 5 ಶ್ರೇಷ್ಠ ಸಹಕಾರಿಗಳನ್ನು ಹಾಗೂ 9 ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜಿವ, ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಸತೀಶಚಂದ್ರ, ಶ್ರೀ ಎಮ್.ಬಿ.ಕಲಾಲ, ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ದಿನೇಶ ಗುಪ್ತಾ, ಶ್ರೀ ಶ್ರೀಕಾಂತ ಹತನುರೆ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಮತ್ತು ಅಧಿಕಾರಿಗಳು ಭಾಗವಹಿಸಿದ್ದರು.

**ಶ್ರೇಷ್ಠ ಸಹಕಾರಿ ಪುರಸ್ಕೃತರು :**

ಶ್ರೀ ಶಿವಾನಂದ ಮಂಟಾಳ್ಕರ, ಬೀದರ. ಶ್ರೀ ಬಾಲಕೃಷ್ಣ ಶಂಕರ ಹತನೂರಿ, ಬೆಳಗಾವಿ. ಶ್ರೀ ಕೋಲಿನ ಟಿಮ್ಸ್, ಬೆಂಗಳೂರು ಶ್ರೀ ವೈ. ಎಸ್.ಸುಬ್ರಮಣ್ಯ ಕೊಪ್ಪ ಶ್ರೀ ಕಮಲಾಕರ ವಾಸು ನಾಯಕ ಉತ್ತರ ಕನ್ನಡ ಇವರುಗಳಿಗೆ ಶ್ರೇಷ್ಠ ಸಹಕಾರಿ ಪ್ರಶಸ್ತಿ ನೀಡಲಾಯಿತು.

**ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆ ಪ್ರಶಸ್ತಿ ಪಡೆದ ಸಹಕಾರಿ ಸಂಸ್ಥೆಗಳು :**

ಶ್ರೀ ಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿ ಬೆಳಗಾವಿ, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ಬೆಳಗಾವಿ ಜಿಲ್ಲೆ, ಶ್ರೀ ವೇಮನ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು, ಸಮೃದ್ಧಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ಗೌರಿಬಿದನೂರು. ಕೋಲಾರ ಜಿಲ್ಲೆ, ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಪುತ್ತೂರು. ದ.ಕ. ಜಿಲ್ಲೆ, ಮುಂಜಾವು ಮಹಿಳಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ ರಾಯಚೂರು, ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಹಾಗೂ ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು. ಈ ಸಂಸ್ಥೆಗಳಿಗೆ ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ ನೀಡಲಾಯಿತು.



"ಉತ್ತಮ ಸಹಕಾರಿ ಸಂಸ್ಥೆ"ಪುರಸ್ಕೃತ ಸಂಸ್ಥೆಗಳ ಅಧ್ಯಕ್ಷರು/ಪ್ರತಿನಿಧಿಗಳು



ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರು.

# 8ನೇ ಅಂತರ ರಾಷ್ಟ್ರೀಯ ಸಹಕಾರ ಅಧ್ಯಯನ ಹಾಗೂ ಸಂಶೋಧನಾ ಸಮ್ಮೇಳನದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಮನ್ನಣೆ : ಸಾಧನೆಗಳ ಬಗ್ಗೆ ಮೆಚ್ಚುಗೆ

ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ (ಐಸಿಎ) ಮತ್ತು ಸಹಕಾರ ಮತ್ತು ಅರ್ಥಶಾಸ್ತ್ರ ವಿಭಾಗ ಮೈಸೂರು ವಿಶ್ವವಿದ್ಯಾಲಯ ಮಾನಸಗಂಗೋತ್ರಿ ಮೈಸೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ : 29-30 ನವೆಂಬರ್ 2013 ಈ ಎರಡು ದಿನಗಳಂದು 8ನೇ ಅಂತರರಾಷ್ಟ್ರೀಯ ಸಹಕಾರ ಅಧ್ಯಯನ ಹಾಗೂ ಸಂಶೋಧನಾ ಸಮ್ಮೇಳನದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಚಟುವಟಿಕೆಯನ್ನು ಬಿಂಬಿಸುವ ವಿಷಯ ಪ್ರಸ್ತಾವನೆಯನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲರವರು ಮಂಡಿಸಿ ಎಲ್ಲ ಸಹಕಾರಿ ಸಂಶೋಧಕರ ಹಾಗೂ ಸಹಕಾರಿ ತಜ್ಞರ ಗಮನ ಸೆಳೆದರು. ಸೌಹಾರ್ದ ಸಹಕಾರಿ ಕ್ಷೇತ್ರದ ಹುಟ್ಟು, ಬೆಳವಣಿಗೆ, ಸಾಧನೆಗಳು, ವಿವಿಧರೀತಿಯ ಹಾಗೂ ವಿಶೇಷ ಚಟುವಟಿಕೆಗಳ ಸೌಹಾರ್ದ ಸಹಕಾರಿಗಳ ಪ್ರಗತಿ, ಹಾಗೂ ಮುಂಬರುವ ಯೋಜನೆಗಳ ಬಗ್ಗೆ ವಿವರಣೆ ನೀಡಿದರು.

ಈ ಅಧಿವೇಶನದ ಅಧ್ಯಕ್ಷತೆಯನ್ನು ಪುಣೆಯ ವೈಕುಂಠಮೆಹತಾ ರಾಷ್ಟ್ರೀಯ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ಡಾ. ಪರಂಜ್ಯೋತಿ ಯವರು ವಹಿಸಿದ್ದರು. ನಂತರ ಮಾತನಾಡಿದ ಶ್ರೀಯುತರು ಕರ್ನಾಟಕದ ಈ ವ್ಯವಸ್ಥೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರಿ ಕ್ಷೇತ್ರದಲ್ಲಿ ಇದೊಂದು ಉತ್ತಮ ಬೆಳವಣಿಗೆಯಾಗಿದೆ. ಮತ್ತು ಅನುಕರಣೀಯವಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿದ್ದ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಕರ್ನಾಟಕದ ಈ ವ್ಯವಸ್ಥೆ ಅತ್ಯಂತ ವಿಶಿಷ್ಟವಾಗಿರುವುದರ ಬಗ್ಗೆ ವಿವರಣೆ ನೀಡಿದರು.



**ಅಧಿವೇಶನದ ಅಧ್ಯಕ್ಷ ಡಾ. ಪರಂಜ್ಯೋತಿ ಅವರಿಂದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲಅವರು ಪ್ರಶಸ್ತಿ ಪತ್ರ ಸ್ವೀಕರಿಸುತ್ತಿರುವುದು.**

## ಸಹಕಾರ ಕ್ಷೇತ್ರದಲ್ಲಿ ಅಧ್ಯಯನ ಹಾಗೂ ಸಂಶೋಧನೆಗಳು ಅವಶ್ಯಕ - ಶ್ರೀ ಹೆಚ್.ವಿ.ರಾಜೀವ



ಸಹಕಾರ ಕ್ಷೇತ್ರ ಒಂದು ಆರ್ಥಿಕ ವ್ಯವಸ್ಥೆ. ಈ ವ್ಯವಸ್ಥೆಯನ್ನು ಭದ್ರಪಡಿಸುವುದು ಸಹಕಾರಿಗಳ ಜವಾಬ್ದಾರಿ. ವ್ಯವಸ್ಥೆಯನ್ನು ಭದ್ರಪಡಿಸುವುದಕ್ಕಾಗಿ ಅಧ್ಯಯನ ಹಾಗೂ ಸಂಶೋಧನೆಗಳು ನಿರಂತರವಾಗಿ ನಡೆಯುತ್ತಿರಬೇಕು. ಅಂತಹ ಒಂದು ಸಮ್ಮೇಳನವನ್ನು ಐಸಿಎದವರು ಸಹಕಾರ ಹಾಗೂ ಅರ್ಥಶಾಸ್ತ್ರ ವಿಭಾಗ ಮೈಸೂರು ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ ಮೈಸೂರು ಇವರೊಂದಿಗೆ ಸೇರಿ ಹಮ್ಮಿಕೊಂಡಿರುವುದು ಅರ್ಥಪೂರ್ಣವಾಗಿದೆ.

ಈ ಸಮ್ಮೇಳನದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಒಂದು ವಿಷಯ ಮಂಡನೆಗೆ ಅವಕಾಶ ನೀಡಿರುವುದಕ್ಕಾಗಿ ಸಂಯುಕ್ತ ಸಹಕಾರಿಯ ಪರವಾಗಿ ಧನ್ಯವಾದಗಳನ್ನು ತಿಳಿಸಿದರು. "ಸಹಕಾರಿ ಸಂಸ್ಥೆಗಳನ್ನು ಮುಖ್ಯವಾಹಿನಿಗೆ ತರುವುದು" ಎಂಬುದು ಸಮ್ಮೇಳನದ ಧ್ಯೇಯವಾಗಿತ್ತು. ಸಮ್ಮೇಳನದಲ್ಲಿ ಚೈನಾ, ಮಲೇಶಿಯಾ, ಸಿಂಗಪೂರ, ಜಪಾನ್ ಮುಂತಾದ ಏಷ್ಯಾ ರಾಷ್ಟ್ರಗಳಿಂದ, ದೇಶದ ಇತರೆ ರಾಜ್ಯಗಳಿಂದ ಹಾಗೂ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಿಂದ ಸಹಕಾರಿ ತಜ್ಞರು, ಸಂಶೋಧನಾ ತಜ್ಞರು, ಪ್ರಾಧ್ಯಾಪಕರುಗಳು ಅರ್ಥಶಾಸ್ತ್ರ ಹಾಗೂ ಸಹಕಾರ ಸ್ನಾತಕೋತ್ತರ ಹಾಗು ಪದವಿ ವಿದ್ಯಾರ್ಥಿಗಳು ಒಟ್ಟಾರೆ 300 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ವಿವಿಧ ವಿಷಯಗಳ ಬಗ್ಗೆ 30 ವಿಷಯಗಳ ಮಂಡನೆಯಾಯಿತು.

## ವಿಶ್ವ ಅರ್ಥವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರವನ್ನು ಮುಖ್ಯವಾಹಿನಿಯಾಗಿಸುವ ಪ್ರಯತ್ನ - ಪ್ರೊ.ಯಶವಂತ ಡೋಂಗ್ರೆ



ಪ್ರಾರಂಭದಲ್ಲಿ ಮೈಸೂರು ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ಶ್ರೀಮತಿ ಲೀಲಾವತಿಯವರು ಸ್ವಾಗತಿಸಿದರು. ಕೊನೆಯಲ್ಲಿ ಪ್ರೊ. ಎಮ್. ಇಂದಿರಾರವರು ವಂದನಾರ್ಪಣೆ ಮಾಡಿದರು. ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಪ್ರತಿನಿಧಿಗಳು ಇದೊಂದು ಉತ್ತಮ ಹಾಗು ಅಧ್ಯಯನ ಯೋಗ್ಯ ಮತ್ತು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಸಮ್ಮೇಳನ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಯಶವಂತ ಡೋಂಗ್ರೆಯವರು ಮಾತನಾಡಿ ಈ ಸಮ್ಮೇಳನದ ಅಂಗವಾಗಿ ಉತ್ತಮವಾದ ಅಂತರ ರಾಷ್ಟ್ರ ಮಟ್ಟದ ಸ್ಮರಣಿಕೆಯನ್ನು ಹೊರತರಲಾಗುವುದು ಇಫ್ಕೋ ಫೌಂಡೇಷನ್ ಅವರು ಈ ಸಮ್ಮೇಳನದಲ್ಲಿ ಭಾಗವಹಿಸಿ ಇಫ್ಕೊ ಫೌಂಡೇಶನ್ ವತಿಯಿಂದ ಅಧ್ಯಯನ ಹಾಗೂ ಸಂಶೋಧನೆಗೆ ಎಲ್ಲ ವಿಧವಾದ ನೆರವು ನೀಡಲು ತೀರ್ಮಾನಿಸಿರುವುದು ಸ್ವಾಗತಾರ್ಹ ಎಂದರು.

# ಎಲ್ಲಾ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಈ ಸಹಕಾರ : ಆದರೆ ಮಮಕಾರದ ಕೊರತೆ – ಶ್ರೀವಾಸ್ತವ






ಪ್ರಪಂಚದ ಎಲ್ಲ ಸಮಸ್ಯೆಗಳಿಗೂ ಪರಿಹಾರ ಒದಗಿಸಬಲ್ಲ ಶಕ್ತಿ ಸಹಕಾರ ಕ್ಷೇತ್ರಕ್ಕಿದೆ. ಪ್ರಪಂಚದಲ್ಲಿ 2007–08 ಆರ್ಥಿಕ ಹಿನ್ನಡೆಯಾದಾಗ ಅನೇಕ ದೊಡ್ಡ ದೊಡ್ಡ, ರಾಷ್ಟ್ರಗಳು ಕಂಪನಿಗಳು ದಿವಾಳಿಯಾದವು. ಆದರೆ, ಸಹಕಾರ ಕ್ಷೇತ್ರ ಮಾತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತ ಬಂದಿದೆ. ಪ್ರಪಂಚದ ಆರ್ಥಿಕ ತಜ್ಞರು ಏನೇ ಆರ್ಥಿಕ ಸಮಸ್ಯೆಗಳು ಬಂದರೂ ಸಹಕಾರ ಕ್ಷೇತ್ರದಲ್ಲಿ ಅದಕ್ಕೆ ಪರಿಹಾರ ಸಿಗುತ್ತದೆ ಎಂದು ವಿಶ್ವಾಸದಿಂದ ಹೇಳುತ್ತಾರೆ. ಅಂತಹ ಸಹಕಾರ ಕ್ಷೇತ್ರ ನಮ್ಮದು. ಇದನ್ನು ಬೆಳೆಸಬೇಕು. ಮತ್ತು ಪ್ರೋತ್ಸಾಹ ನೀಡಬೇಕು. ಎಂದರು.

ವಿಷಯದಲ್ಲಿ ಮುಂದೆ ಬರುವುದಿಲ್ಲ ಇದೊಂದು ವಿಷಾದನೀಯ ಸಂಗತಿ ಎಂದು ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಬಾಷಣ ಮಾಡಿದ ಇಫ್ಕೋ ಫೌಂಡೇಶನ್ನಿನ ಮೆನೆಜಿಂಗ್ ಟ್ರಸ್ಟಿ ಶ್ರೀ ಜೆ.ಎನ್.ಎಲ್. ಶ್ರೀವಾಸ್ತವ ತಿಳಿಸಿದರು.

# ಗುರುತಿಸಲ್ಪಡುವ ಹಾಗೂ ಸ್ವಾವಲಂಬಿ ಸಹಕಾರಿ ಸಂಸ್ಥೆಗಳು ಅಗತ್ಯ – ಶ್ರೀ ಅಕೀರಾ ಕುರಿಮೊಟ್ಟೋ

ಜಪಾನಿನ ಗ್ರಾಹಕ ಸಹಕಾರ ಮಹಾಮಂಡಳದ ನಿರ್ದೇಶಕ ಶ್ರೀ ಅಕೀರಾ ಕುರಿಮೊಟ್ಟೋರವರು ಸಮ್ಮೇಳನವನ್ನು ಉದ್ಘಾಟಿಸಿ ಪ್ರಮುಖ ಭಾಷಣ ಮಾಡಿದರು. ಸಹಕಾರ ಸಂಸ್ಥೆಗಳು ಪ್ರಾರಂಭವಾಗುವುದು ಮುಖ್ಯವಲ್ಲ. ಸಮಾಜದಿಂದ ಗುರುತಿಸಲ್ಪಡುವಂತಾಗಬೇಕು ಮತ್ತು ಸ್ವಾವಲಂಬಿಯಾಗಿ ಕಾರ್ಯನಿರ್ವಹಿಸಬೇಕು. ಹಾಗಾದಾಗ ಮಾತ್ರ ಸಹಕಾರ ಕ್ಷೇತ್ರ ಸಮಾಜದ ಮುಖ್ಯವಾಹಿನಿಯಲ್ಲಿ ಪರಿಗಣಿಸಲ್ಪಡುತ್ತದೆ ಎಂದು ತಿಳಿಸಿದರು.

ಸಹಕಾರ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಅಂಕಿ ಅಂಶಗಳ ಕೊರತೆ ಕಾಣುತ್ತಿದೆ. ಸಂಶೋಧಕರು ಈ ಬಗ್ಗೆ ಎಚ್ಚರ ವಹಿಸಿ ಅಧ್ಯಯನ ಮಾಡಬೇಕು. ಸಮಾಜಕ್ಕೆ ನಿಖರವಾದ ಮಾಹಿತಿಯನ್ನು ಒದಗಿಸಬೇಕು. ಪೂರಕ ವಿಷಯಗಳ ಬಗ್ಗೆ ಸಕಾರಾತ್ಮಕ ವಿಷಯಗಳ ಬಗ್ಗೆ ಹೆಚ್ಚು ಆಳವಾಗಿ ಅಧ್ಯಯನ ಮಾಡಬೇಕು. ನಕಾರಾತ್ಮಕ ವಿಷಯಗಳನ್ನು ಸಕಾರಾತ್ಮಕವಾಗಿ ಪರಿವರ್ತಿಸುವಲ್ಲಿ ಸಂಶೊಧನೆ ನಡೆದಾಗ ಮಾತ್ರ ಸಹಕಾರ ಕ್ಷೇತ್ರವು ವಿಶ್ವದ ಅರ್ಥವ್ಯವಸ್ಥೆಯ ಮುಖ್ಯ ವಾಹಿನಿಯಲ್ಲಿ ಗುರುತಿಸಲಾಗುತ್ತದೆ. ಸಹಕಾರ ಕ್ಷೇತ್ರದ ಶಕ್ತಿಯ ಬಗ್ಗೆ ಸಂದೇಹವಿಲ್ಲ. ಅದನ್ನು ಬೆಳೆಸುವ ಪ್ರಕ್ರಿಯೆ ನಿಧಾನಗತಿಯಲ್ಲಿದೆ ಎಂದರು.

**ಸಹಕಾರ ಕ್ಷೇತ್ರದ ಶಕ್ತಿ ವ್ಯಾಪ್ತಿ ಸೀಮಾತೀತ – ಪ್ರೊ.ಕೆ.ಎಸ್.ರಂಗಪ್ಪ :**

ಸಮ್ಮೆಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರೋ.ಕೆ.ಎಸ್.ರಂಗಪ್ಪರವರು ಸಹಕಾರ ಕ್ಷೇತ್ರದ ಸಾಧನೆ ಅಪಾರವಾಗಿದೆ. ಇದರ ವ್ಯಾಪ್ತಿಯೂ ಸೀಮಾತೀತವಾಗಿದೆ. ಈ ಕ್ಷೇತ್ರದ ಬೆಳವಣಿಗೆಯ ಕುರಿತು ಆಳವಾದ ಅಧ್ಯಯನ ಅಗತ್ಯ.



ಸಮ್ಮೇಳನದ ಆಯೋಜಕರು ಹಾಗು ವಿದೇಶಿ ಪ್ರತಿನಿಧಿಗಳ ಜೊತೆಗೆ ಸಂಯುಕ್ತ ಸಹಕಾರಿಯ ಪ್ರತಿನಿಧಿಗಳು

## ಇಂಡೋನೇಶಿಯದಲ್ಲಿ 9ನೇ ಐಸಿಎ ಏಷ್ಯಾ ಫೆಸಿಫಿಕ್ ಸಮ್ಮೆಳನ

ಮುಂದಿನ ದಿನಗಳಲ್ಲಿ ಸಹಕಾರಿ ಕ್ಷೇತ್ರವು ಸಾಮಾಜಿಕ ಅಭಿವೃದ್ಧಿಯನ್ನು ಬಂಡವಾಳ ವನ್ನಾಗಿಸಿಕೊಂಡು ಕಾರ್ಯನಿರ್ವಹಿಸುವ ನಿರ್ಣಯವನ್ನು ಅಂಗೀಕರಿಸುತ್ತದೆ – ಪ್ರಾಥಮಿಕ ಹಾಗೂ ಪ್ರಾಂತೀಯ ಮಟ್ಟದಲ್ಲಿ ವಿವಿಧ ಸ್ವಯಂ ಸೇವಾ ಸಂಘಟನೆಗಳು ಈ ರೀತಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಸಂಶೋಧನೆ ಹಾಗೂ ಅಧ್ಯಯನ ಕಾರ್ಯಗಳನ್ನು ಪ್ರಾರಂಭಿಸಲು ಸಮ್ಮೇಳನದ ಆಶಯವಾಗಿರುತ್ತದೆ.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಬೆಂಗಳೂರಿನ ಜಯನಗರದಲ್ಲಿ 9ನೇ ಶಾಖೆ

ಪುತ್ತೂರಿನ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ದರ್ಬೆ ಇದರ 9ನೇ ಶಾಖೆಯು ಬೆಂಗಳೂರಿನ ಜಯನಗರದಲ್ಲಿ ದಿನಾಂಕ : 24-11-13ರಂದು ಸ್ಥಳೀಯ ಶಾಸಕರಾದ ಶ್ರೀ ಬಿ.ಎನ್.ವಿಜಯಕುಮಾರ್ ಉದ್ಘಾಟಿಸಿ ನೆರವೇರಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಿಧಾನ ಪರಿಷತ್ ಮಾಜಿ ಸದಸ್ಯರಾದ ಶ್ರೀ ಅಣ್ಣಾ ವಿನಯಚಂದ್ರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಯನಗರದ ಕಾರ್ಪೋರೇಟರ್ ಶ್ರೀ ಮುನಿಸಂಜೀವಯ್ಯ, ಡಾ. ವಿದ್ಯಾಧರ ಎಸ್. ಮಣಿಪಾಲ ಆಸ್ಪತ್ರೆ ಬೆಂಗಳೂರು, ಇವರು ಭಾಗವಹಿಸಿದ್ದರು ಇದೇ ಸಂದರ್ಭದಲ್ಲಿ ಡಾ. ವಿದ್ಯಾಧರ ಎಸ್. ಇವರು ಭದ್ರತಾ ಕೊಠಡಿಯನ್ನು ಉದ್ಘಾಟಿಸಿದರು. 2014ನೇ ಸಾಲಿನ ಕ್ಯಾಲೆಂಡರ್ ಮತ್ತು ಇ-ಸ್ಟಾಂಪ್‌ನ್ನು ಬಿಡುಗಡೆಗೊಳಿಸಲಾಯಿತು. ಸಮಾರಂಭದಲ್ಲಿ ಎಚ್.ಎಸ್.ಕಾಮತ್, ಡಾ. ವಿದ್ಯಾಧರ ಎಸ್. ಮತ್ತು ರಾಷ್ಟ್ರಮಟ್ಟದ ಓಟಗಾರ್ತಿ ಕು.ಅನುಷ ಇವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಥಮ ಠೇವಣಿ ಪತ್ರವನ್ನು ಬಿಡುಗಡೆ ಗೊಳಿಸಲಾಯಿತು. ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ



ಪ್ರಾಸ್ತವಿಕ ಮಾತುಗಳನ್ನಾಡಿದರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ್ ಉಪಸ್ಥಿತರಿದ್ದರು. ಕು.ಶೃತಿ ನಾಯಕ್ ಪ್ರಾರ್ಥನೆಯನ್ನು ನೆರವೇರಿಸಿದರು. ನಿರ್ದೇಶಕರಾದ ಶ್ರೀಯುತ ಸುನಿಲ್ ಬೋರ್ಕರ್ ಕಾರ್ಯಕ್ರಮ ನೆರವೇರಿಸಿದರು, ನಿರ್ದೇಶಕರಾದ ಆರ್.ಕೆ. ನಾಯಕ್ ಸ್ವಾಗತಿಸಿದರೆ, ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ. ಧನ್ಯವಾದ ಸಮರ್ಪಿಸಿದರು.

# ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು - ನಾಲ್ಕನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ

ನಗರದ ಕೇಂದ್ರ ಭಾಗ ವಿ.ವಿ ಪುರಂ ನಲ್ಲಿರುವ ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ತನ್ನ ನಾಲ್ಕನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ : 22-09-2013 ರಂದು, ಬೆಳಗ್ಗೆ 11-00ಗಂಟೆಗೆ ಸಜ್ಜನ್‌ರಾವ್ ಸರ್ಕಲ್‌ನಲ್ಲಿರುವ, ಸಜ್ಜನ್‌ರಾವ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿತ್ತು.

ತನ್ನ ಸದಸ್ಯರಲ್ಲಿ ಉತ್ತಮ ಹಾಗೂ ಗುರುತರ ಸಾಧನೆಯನ್ನು ಮಾಡಿದ ಕೆಳಕಂಡ ಮೂವರು ಮಹಾನೀಯರನ್ನು ಆಯ್ಕೆ ಮಾಡಿ ಸಮಾರಂಭದಲ್ಲಿ ಅವರನ್ನು ಅಭಿನಂದಿಸಲಾಯಿತು.

1. ಡಾ. ವೇಮಗಲ್ ಡಿ. ನಾರಾಯಣ ಸ್ವಾಮಿ, ಅಸಿಸ್ಟೆಂಟ್ ಕಮಿಷನರ್ ಆಫ್ ಪೊಲೀಸ್, ಕೆ.ಆರ್. ಪುರ, ಬೆಂಗಳೂರು, ಹಾಗೂ ಜನಪ್ರಿಯ ಜನಪದಗಾಯಕರು ಮತ್ತು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.
2. ಶ್ರೀ. ವಿ ಕೃಷ್ಣಾರೆಡ್ಡಿ, ನಿವೃತ್ತ ಸಹಾಯಕ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ಹಾಗೂ ಕೆಂಪೇಗೌಡ ಪ್ರಶಸ್ತಿ ಪುರಸ್ಕೃತರು. ಮತ್ತು ಸಮಾಜ ಸೇವಕರು.
3. ಪ್ರೊ. ಕೆ.ವಿ.ನಾರಾಯಣ, ಪ್ರಖ್ಯಾತ ಗಣಿತ ಶಾಸ್ತ್ರಜ್ಞರು, HOD ವಿವೇಕಾನಂದ ಡಿಗ್ರಿ ಕಾಲೇಜು, ಬೆಂಗಳೂರು. ಜೊತೆಗೆ ಸದಸ್ಯರ ಮಕ್ಕಳಲ್ಲಿ 2010-11 ಮತ್ತು 2012-13ನೇ ಸಾಲಿನ, ಎಸ್‌ಎಸ್‌ಎಲ್‌ಸಿ ಮತ್ತು



ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದವರಿಗೆ ಪ್ರತಿಭಾ ಪುರಸ್ಕರಿಸಲಾಯಿತು.

ಅಧ್ಯಕ್ಷರಾದ ಶ್ರೀ ಬಿ.ವಿ. ಸದಾನಂದ ರೆಡ್ಡಿಯವರು, 31 ಮಾರ್ಚ್ 2013ರ ಸಹಕಾರಿಯ ವರ್ಷಾಂತ್ಯಕ್ಕೆ ದಾಖಲಿಸಿದ, ವಿದ್ಯುಕ್ತವಾಗಿ ಬಿಡುಗಡೆಗೊಳಿಸಿದ ಅಂಕಿ ಸಂಖ್ಯೆಗಳ ಬಗ್ಗೆ ತಿಳಿಸುತ್ತಾ ಸದಸ್ಯರು-1723, ಷೇರು ಬಂಡವಾಳ - 172.88 ಲಕ್ಷ, ಕಾಯ್ದಿರಿಸಿದ ಮತ್ತು ಇತರೆ ನಿಧಿಗಳು-35.39 ಲಕ್ಷ, ಠೇವಣಿಗಳು- 2058.88 ಲಕ್ಷ, ಹೂಡಿಕೆಗಳು- 553ಲಕ್ಷ, ಸಾಲ ಮತ್ತು ಮುಂಗಡಗಳು 1749.65 ಲಕ್ಷ, ನಿವ್ವಳ ಲಾಭಾಂಶ 89.13ಲಕ್ಷ ಮತ್ತು ದುಡಿಯುವ ಬಂಡವಾಳ 2267.13ಲಕ್ಷಗಳೆಂದು ತಿಳಿಸಿ, ಸಹಕಾರಿಯು, ಠೇವಣಿ, ಸಾಲ ಮತ್ತು ಮುಂಗಡಗಳಿಗಷ್ಟೇ ಸೀಮಿತವಾಗದೆ ಇ-ಸ್ಟಾಂಪಿಗ್, ಸುವಿಧ ಸೇವೆಗಳು ಮುಂತಾದವುಗಳಲ್ಲದೆ, ಚಿಟ್ ವ್ಯವಹಾರವನ್ನೂ ಸಹ ಯಶಸ್ವಿಯಾಗಿ ನಡೆಸುತ್ತಿದ್ದು, ಸತತವಾಗಿ ಪ್ರತಿಶತ 18ರಂತೆ ಡಿವಿಡೆಂಡ್ ನೀಡುತ್ತಿದೆ ಎಂದು ತಿಳಿಸಿದರು.

# ಜನವರಿ 1 ರಂದು ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಕರೆ

ಕರ್ನಾಟಕ ರಾಜ್ಯದಲ್ಲಿ ಜನವರಿ 1, 2001 ರಂದು ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ಪ್ರಯುಕ್ತ ಜನವರಿ 1ರಂದು ರಾಜ್ಯಾದ್ಯಂತ ಸೌಹಾರ್ದ ಸಹಕಾರಿಗಳು "ಸೌಹಾರ್ದ ಸಹಕಾರಿ ದಿನ"ವನ್ನಾಗಿ ಆಚರಿಸಲು ಸಂಯುಕ್ತ ಸಹಕಾರಿಯು ಎಲ್ಲಾ ಸಹಕಾರಿಗಳಿಗೆ ಈ ಮೂಲಕ ತಿಳಿಸಿದೆ. ಅಂದು ಪ್ರತಿಯೊಂದು ಸಹಕಾರಿಯು ತನ್ನ ಆವರಣದಲ್ಲಿ ಸಮಾರಂಭವನ್ನು ಏರ್ಪಡಿಸಿ, ಸಹಕಾರಿ ಗಣ್ಯರನ್ನು ಹಾಗೂ ಹಿರಿಯ ಸಹಕಾರಿಗಳನ್ನು ಆಮಂತ್ರಿಸಿ ಸಹಕಾರಿ ಧ್ವಜವನ್ನು ಹಾರಿಸಬೇಕು. ಸಹಕಾರಿಯ ಅಸ್ತಿತ್ವವನ್ನು ಸಾರ್ವಜನಿಕರಿಗೆ ತೋರಿಸುವಂತಹ, ಸಭೆ ಸಮಾರಂಭಗಳನ್ನು ಏರ್ಪಡಿಸಿ ಸಹಕಾರಿಯ ಸಾಧನೆಗಳನ್ನು, ಸೇವಾ ಸೌಲಭ್ಯಗಳನ್ನು ಹಾಗೂ ಮುಂದಿನ ದಿನಗಳಲ್ಲಿನ ಯೋಜನೆಗಳನ್ನು ಪ್ರಚಾರ ಮಾಡುವಂತಹ ಹಾಗೂ ಪ್ರಬಂಧ ಹಾಗೂ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಸೌಹಾರ್ದ ಸಹಕಾರಿಯ ದಿನಾಚರಣೆಯ ಕಾರ್ಯಕ್ರಮದ ಒಂದು ಉತ್ತಮ ಛಾಯಾಚಿತ್ರ ಹಾಗೂ ವರದಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿಕೊಡಲು ಕೋರಿದೆ.

## ಅನುಮತಿ ವಾಪಸ್

- ಕರ್ನಾಟಕ ಸರ್ಕಾರ ಸಹಕಾರ ಇಲಾಖೆ ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ ಆರ್‌ಸಿಆರ್/ಸೌಹಾರ್ದ/ನೋಂದಣಿ/197/2013–14 ದಿನಾಂಕ : 25.10.2013. ಡಾ॥ ಎನ್ ಎಸ್. ಚನ್ನಪ್ಪ ಗೌಡ ಸಹಕಾರಿಗಳ ನಿಬಂಧಕರು,ಬೆಂಗಳೂರು ಇವರು ತಿಳಿಸಿದಂತೆ ಉದ್ದೇಶಿತ ವಿಶಾಲ ಈಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಬೆಂಗಳೂರು ಇದರ ಕಛೇರಿಯಿಂದ ಷೇರುಹಣ ಸಂಗ್ರಹಸಿಲು ಅನುಮತಿನೀಡಿ 60 ದಿವಸದೊಳಗಾಗಿ ಷರತ್ತುಗಳನ್ನು ಪೂರೈಸಿ ನೋಂದಣಿಗೆ ಪ್ರಸ್ತಾವೆ ಸಲ್ಲಿಸಲು ಸೂಚಿಸಲಾಗಿತ್ತು. ತದನಂತರ ತಿಳಿಸಿದ ಕೋರಿರುವ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ ಅಥವಾ ಪ್ರತ್ಯುತ್ತರಿಸಿರುವುದಿಲ್ಲ. ಇದರಿಂದ ಉದ್ದೇಶಿತ ಸಹಕಾರಿಯನ್ನು ಸ್ಥಾಪಿಸುವಲ್ಲಿ ಆಸಕ್ತಿ ಇಲ್ಲದಿರುವುದು ಸ್ಪಷ್ಟವಾಗಿದೆ. ಆದುದರಿಂದ ನಿಮಗೆ ಹಿಂದಿನ ಪತ್ರಗಳಲ್ಲಿ(ಉಲ್ಲೇಖ 3 ಮತ್ತು 4ರಲ್ಲಿ) ತಿಳಿಸಿದಂತೆ ಷೇರುಸಂಗ್ರಹಣೆಗೆ ನೀಡಲಾಗಿದ್ದ ಅನುಮತಿಯನ್ನು ಹಿಂಪಡೆಯಲಾಗಿದೆ. ಇನ್ನು ಮುಂದೆ ಸಾರ್ವಜನಿಕರಿಂದ ಹಣ ಸಂಗ್ರಹಿಸದಿರಲು ಸೂಚಿಸಿದೆ. ಎಂದು ತಿಳಿಸಿರುತ್ತಾರೆ.
- ಕರ್ನಾಟಕ ಸರ್ಕಾರ ಸಹಕಾರ ಇಲಾಖೆ ಸಹಕಾರಇಗಳ ಉಪ ನಿಬಂಧಕರು, ತುಮಕೂರು ಜಿಲ್ಲೆ, ತುಮಕೂರು ಇದರ ಸಂಖ್ಯೆ : ಡಿ.ಆರ್. ಟಿ./ನೀಂದಣಿ/ ಸೌ.ಕಾ/ಸಿ.ಆರ್–11/2013–14 ದಿನಾಂಕ : 19.10.2013 ರಂದು ಉದ್ದೇಶಿತ ಕರ್ನಾಟಕ ಕಾಮಧೇನು ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ತುಮಕೂರು ಇದರ ನೋಂದಣಿಗೆ ಪ್ರಾರಂಭಿಕ ಷೇರು ಸಂಗ್ರಹಿಸಲು ಉಲ್ಲೇಖ(1)ರ ಆದೇಶದಲ್ಲಿ ಮತ್ತು ದಿನಾಂಕ: 30.03.2013ರ ಪತ್ರದಲ್ಲಿ ನೀಡಲಾಗಿದ್ದು ಅನುಮತಿಯನ್ನು ಹಿಂತೆಗೆದುಕೊಂಡು ಆದೇಶಿಸಿದೆ.ಎಂದು ಸಹಕಾರಿಗಳ ಉಪನಿಬಂಧಕರಾದ ಹೆಚ್.ಬಾಲಶೇಖರ್ ತುಮಕೂರು ಇವರು ಉದ್ದೇಶಿತ ಕರ್ನಾಟಕ ಕಾಮಧೇನು ವಿವಿದೋದ್ದೇಶ ಸೌಹಾರ್ದ ಸಹಕರಿ ನಿ., ತುಮಕೂರು ಇದರ ಮುಖ್ಯ ಪ್ರವರ್ತಕರಿಗೆ ತಿಳಿಸಲಾಗಿದೆ.
- ಉದ್ದೇಶಿತ ಸೂರ್ಯ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ನೋಂದಣಿ ಪೂರ್ವ ಷೇರು ಸಂಗ್ರಹಿಸಲು ಅನುಮತಿ ಯನ್ನು ಉಲ್ಲೇಖ (8)ರ ಸುತ್ತೋಲೆ ಹಾಗೂ ಉಲ್ಲೇಖ(2)ರ ಅನುಮತಿ ಪತ್ರದ ರೀತ್ಯ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯನ್ನೊಂದುವ ಸಹಕಾರಿಯು ರೂ. 20 ಲಕ್ಷ ಷೇರುಹಣವನ್ನು ಒಂದುಸಾವಿರ ಸದಸ್ಯರಿಂದ ಸಂಗ್ರಹಿಸಬೇಕಾಗಿರುತ್ತದೆ. ಇದರಿಂದ ಮುಖ್ಯಪ್ರವರ್ತಕರ ಕೋರಿಕೆಯನ್ನು ಪರಿಗಣಿಸಲು ಸಾಧ್ಯವಿಲ್ಲ. ಅಲ್ಲದೆ ಷೇರು ಸಂಗ್ರಹಣೆಗೆ ಉತ್ಸುಕತೆ ತೋರಿಸಿರುವುದಿಲ್ಲ ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಲಾಗಿರುವುದರಿಂದ ನಿಮಗೆ ಉಲ್ಲೇಖ(2)ರ ಪತ್ರದಲ್ಲಿ ಷೇರುಸಂಗ್ರಹಣೆಗೆ ನೀಡಲಾಗಿದ್ದ ಅನುಮತಿಯನ್ನು ಹಿಂಪಡೆಯಲಾಗಿರುತ್ತದೆ. ಇನ್ನು ಮುಂದೆ ಸಾರ್ವಜನಿಕರಿಂದ ಷೇರು ಹಣ ಸಂಗ್ರಹಿಸದಿರಲು ಮಾನ್ಯ ಸಹಕಾರಿಗಳ ನಿಬಂಧಕರು ಡಾ॥ ಎನ್.ಎಸ್. ಚನ್ನಪ್ಪ ಗೌಡ ಇವರು ದಿನಾಂಕ : 30.11.2013ರ ಪತ್ರದಲ್ಲಿ ತಿಳಿಸಿರುತ್ತಾರೆ.

## ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ

### ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಸಾಗರ.



ಎಂ.ಎಸ್.ವೆಂಕಟೇಶ್
ಅಧ್ಯಕ್ಷರು



ರಾಜೇಂದ್ರ ಪೈ
ಉಪಾಧ್ಯಕ್ಷ

### ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ



ಎಂ.ಎಸ್. ಬೆಲ್ಲದ
ಅಧ್ಯಕ್ಷರು



ಎಂ.ಕೆ. ಅಮ್ಮಣ್ಣಗಿ
ಪ್ರಧಾನ ವ್ಯವಸ್ಥಾಪಕ

### ಶ್ರೀ ಶ್ರೀಶೈಲಗಿರಿ ಸೌಹಾರ್ದ ಸಹಕಾರಿ ನಿಯಮಿತ



ಶ್ರೀ ನವೀನ್ ಡಿ.ಪಿ
ಅಧ್ಯಕ್ಷರು



ಶ್ರೀ ತ್ಯಾಗರಾಜ್
ಉಪಾಧ್ಯಕ್ಷರು

# ಇ-ಸ್ಟಾಂಪಿಂಗ್ ತರಬೇತಿಗಳು; ಮಾದರಿ ವ್ಯವಸ್ಥೆ - ಜಯಾನಂದ ಜಾಧವ



ಸಹಕಾರ ಕ್ಷೇತ್ರದ ಮುಖಾಂತರ ಇ-ಸ್ಟಾಂಪಿಂಗ್ ನೀಡುವ ವ್ಯವಸ್ಥೆ ಮಾದರಿ ವ್ಯವಸ್ಥೆಯಾಗಿದ್ದು, ಇದನ್ನು ಸೌಹಾರ್ದ ಸಂಯುಕ್ತ ಸಹಕಾರಿ ಎಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಯಾನಂದ ಜಾಧವ ಅಭಿಪ್ರಾಯಪಟ್ಟರು.

ದಿ : 15/11/2013ರಂದು ನಗರದ ಯಲಿಗೆಮ್ಮ ಹೋಟಲಿನ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಬೆಳಗಾವಿ ಜಿಲ್ಲೆಯ ಅಥಣಿ, ರಾಯಭಾಗ, ಹುಕ್ಕೇರಿ ಹಾಗೂ ಚಿಕ್ಕೋಡಿ ತಾಲೂಕುಗಳ ಇ-ಸ್ಟಾಂಪಿಂಗ್ ಕೇಂದ್ರದಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗಾಗಿ ಏರ್ಪಡಿಸಿದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಅವ್ಯವಹಾರದ ಆಗರವಾಗಿದ್ದ ಸ್ಟಾಂಪ್‌ನಲ್ಲಿ ಪಾರದರ್ಶಕತೆ ನೀಡುವ ದೃಷ್ಟಿಯಿಂದ ಬಂದಿರುವ ಈ ವ್ಯವಸ್ಥೆ ಒಂದು ಮಾದರಿ ವ್ಯವಸ್ಥೆಯಾಗಿದ್ದು, ಪಾರದರ್ಶಕತೆ ಮುಖಾಂತರ ಜನ ಸಾಮಾನ್ಯರಿಗೆ ತಮ್ಮ ಸ್ಥಳದಲ್ಲೇ ಸಿಗುವಂತೆ ಮಾಡಲು ಸಂಯುಕ್ತ ಸಹಕಾರಿಯ ಕಾರ್ಯ ಶ್ಲಾಘನೀಯವಾದದ್ದು. ಇದರಿಂದಾಗಿ ರಾಜ್ಯದಲ್ಲಿ 550ಕ್ಕಿಂತ ಅಧಿಕ ಕೇಂದ್ರಗಳ ಮುಖಾಂತರ ಪ್ರತಿನಿತ್ಯ ರೂ. 1 ಕೋಟಿಗಿಂತ ಅಧಿಕ ರಾಜಸ್ವ ಧನ ನಿಡುವುದರ ಮುಖಾಂತರ ಸರಕಾರದ ಆದಾಯದ ಮೂಲಗಳಲ್ಲಿ ಒಂದಾಗಿದೆ ಎಂದರು. ಇಂತಹ ವಿಶಿಷ್ಟ ಸೌಲಭ್ಯಗಳನ್ನು ಜನಸಾಮಾನ್ಯರಿಗೆ ಯಾವುದೇ ಕುಂದು ಕೊರತೆಯಿಲ್ಲದೆ ಸೇವೆಯನ್ನು ಒದಗಿಸಬೇಕೆಂದು ಸಿಬ್ಬಂದಿಗಳಿಗೆ ಕರೆ ನೀಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಂಗಳೂರಿನ ಸಂಯುಕ್ತ ಸಹಕಾರಿಯ, ಇ-ಸ್ಟಾಂಪಿಂಗ್ ನೋಡಲ್ ಅಧಿಕಾರಿ ಶ್ರೀಮತಿ ಕೃತಿ ಜನಾರ್ಧನ ವಹಿಸಿದರು. ಒಂದು ದಿನ ನಡೆದ ಕಾರ್ಯಾಗಾರದ ಬೆಳಗಿನ ಅವಧಿಯಲ್ಲಿ ಸ್ಟಾಕ್ ಹೋಲ್ಡಿಂಗ್ ಸೌಲಭ್ಯಗಳು ಮತ್ತು ಸವಲತ್ತುಗಳ ಬಗ್ಗೆ ಹಾಗೂ ಮಧ್ಯಾಹ್ನದ ಅವಧಿಯಲ್ಲಿ ದಿನ ನಿತ್ಯ ವ್ಯವಹಾರದಲ್ಲಿ ಆಗುವ ತೊಂದರೆಗಳಿಗೆ ಪರಿಹಾರದ ಬಗ್ಗೆ ಮಾಹಿತಿ ನೀಡಲಾಯಿತು. ಈ ಕಾರ್ಯಾಗಾರದಲ್ಲಿ ನೂರಾರು ಇ-ಸ್ಟಾಂಪಿಂಗ್ ಸಿಬ್ಬಂದಿಗಳು ಸದರಿ ಕಾರ್ಯಾಗಾರದ ಲಾಭವನ್ನು ಪಡೆದುಕೊಂಡರು. ವೇದಿಕೆ ಮೇಲೆ ಸ್ಟಾಕ್ ಹೋಲ್ಡಿಂಗ್ ಅಧಿಕಾರಿಗಳಾದ ಶ್ರೀ ಗುರುರಾಜ ಹಾಗೂ ಅಮಿತ ಉಪಸ್ಥಿತರಿದ್ದರು.

# ಇ-ಸ್ಟಾಂಪಿಂಗ್ ತರಬೇತಿ ಲಾಭ ಪಡೆದುಕೊಳ್ಳಲು ಜಿ.ಆರ್.ನಾಡಗೌಡರ ಕರೆ

ಪ್ರತಿಯೊಬ್ಬ ವ್ಯಕ್ತಿಯ ಬೆಳವಣಿಗೆ ಹಾಗು ಅವನ ಕ್ರಿಯಾಶೀಲತೆಯ ಬೆಳವಣಿಗೆಗೆ ತರಬೇತಿ ಅವಶ್ಯಕ ಅಂತಹ ತರಬೇತಿಯ ಲಾಭ ಪಡೆದು ಕೊಳ್ಳುವಂತೆ ಜಿಲ್ಲಾ ನೋಂದಣಾಧಿಕಾರಿಗಳಾದ ಶ್ರೀ ಜಿ.ಆರ್. ನಾಡಗೌಡರ ಕರೆ ನೀಡಿದರು.

ಬಾಗಲಕೋಟೆಯ ಜಿಲ್ಲಾ ಸಹಕಾರಿ ಯೂನಿಯನ್ ಸಭಾ ಭವನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ರವರು ಬಿಜಾಪುರ ಹಾಗೂ ಬಾಗಲಕೋಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಇ-ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಗಾಗಿ ಹಮ್ಮಿಕೊಂಡ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ ಮುಂಚೆ ನೀಡುತ್ತಿರುವ ಸ್ಟಾಂಪ್‌ಗಳ ಗೊಂದಲದಿಂದಾಗಿ ಇ-ಸ್ಟಾಂಪಿಂಗ್ ಒಂದು ಮಾದರಿ ಸ್ಟಾಂಪ ಆಗಿರುವುದರಿಂದ ಸಾರ್ವಜನಿಕರಿಗೆ ಒಳ್ಳೆ ಸೇವೆ ನೀಡುತ್ತಿದ್ದು ಸರಕಾರದ ಆದಾಯ ಸೋರಿಕೆಯನ್ನು ತಡೆಗಟ್ಟುವಲ್ಲಿ ಸಹಕಾರಿಯಾಗಿದೆ. ಇಂತಹ ಸೇವೆ ನೀಡುತ್ತಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯ ಶ್ಲಾಘನೀಯವಾಗಿದೆ ಎಂದರು. ಇಂತಹ ಸೇವೆ ಒದಗಿಸಲು ಎಲ್ಲ ಸಹಕಾರಿಗಳಿಗೆ ಅವಕಾಶ ನೀಡಿದ್ದಾರೆ. ಅದರ ಸೌಲಭ್ಯವನ್ನು ಸಾರ್ವಜನಿಕರಿಗೆ ಒದಗಿಸಿ ತಮ್ಮ ಸಹಕಾರಿಯ ಆದಾಯ ಬೆಳವಣಿಗೆ ಮಾಡಿಕೊಳ್ಳಲು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರು ಹಾಗು ಇ-ಸ್ಟಾಂಪಿಂಗ್ ನೋಡಲ್ ಅಧಿಕಾರಿಗಳಾದ ಶ್ರೀಮತಿ ಕೃತಿ ಜನಾರ್ದನ್ ವಹಿಸಿದ್ದರು.

ವೇದಿಕೆ ಮೇಲೆ ಮುದ್ದೇ ಬಿಹಾಳದ ಉಪನೋಂದಣಾಧಿಕಾರಿಯಾದ ಲಕ್ಷ್ಮೀಕಾಂತ ಲಕ್ಕುಂಡಿ, ಸ್ಟಾಕ್ ಹೊಲ್ಡಿಂಗ್ ಅಧಿಕಾರಿಗಳಾದ ಗುರುರಾಜ ಹಾಗೂ ಶ್ರೀ ಅಮೀತರವರು ಉಪಸ್ಥಿತರಿದ್ದರು. ಬೆಳಗ್ಗೆಯಿಂದ ಸಂಜೆವರೆಗೆ ನಡೆದ ಕಾರ್ಯಾಗಾರದಲ್ಲಿ ಕಲಂಗಳ ಬಗ್ಗೆ, ಸ್ಟಾಕ್ ಹೋಲ್ಡಿಂಗ್ ಸೌಲಭ್ಯಗಳ ಬಗ್ಗೆ ಹಾಗೂ ದಿನನಿತ್ಯ ಆಗುತ್ತಿರುವ ಕುಂದುಕೊರತೆಗಳ ಬಗ್ಗೆ ಮಾಹಿತಿ ನೀಡಲಾಯಿತು.

## ಇ-ಸ್ಟಾಂಪಿಂಗ್ ಪದ್ಧತಿಯಿಂದಾಗಿ ಸರಕಾರದ ಆದಾಯದ ಸೋರಿಕೆ ಕಡಿಮೆಯಾಗಿದೆ - ಶ್ರೀ ಎಮ್.ಬಿ. ಕಲಾಲ



ಹಲವು ಗೊಂದಲಗಳಿಂದ ಕೂಡಿದ ಸ್ಟಾಂಪ್ ಪದ್ಧತಿಯಿಂದಾಗಿ ಸರಕಾರದ ಆದಾಯದಲ್ಲಿ ಸೋರಿಕೆಯಾಗುತ್ತಿದ್ದುದ್ದನ್ನು ಗಮನಿಸಿ ಕೇಂದ್ರ ಸರಕಾರದ ಇ-ಸ್ಟಾಂಪಿಂಗ್ ಮಾದರಿ ವ್ಯವಸ್ಥೆಯಿಂದಾಗಿ ಸರಕಾರದ ಆದಾಯ ಸೋರಿಕೆ ಕಡಿಮೆಯಾಗಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ಎಂ ಬಿ ಕಲಾಲ ಅಭಿಪ್ರಾಯ ವ್ಯಕ್ತಪಡಿಸಿದರು.

ಹುಬ್ಬಳ್ಳಿಯ ಚೆಂಬರ್ ಆಫ್ ಕಾಮರ್ಸ್ ಸಭಾ ಭವನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಧಾರವಾಡ ಗದಗ ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇ-ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಗಾಗಿ ಹಮ್ಮಿಕೊಂಡ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಇಂದು ಇ-ಸ್ಟಾಂಪಿಂಗ್ ಮಾದರಿ ವ್ಯವಸ್ಥೆ ಜಾರಿಗೆ ಬಂದಿದ್ದರಿಂದ ಸರಕಾರದ ಆದಾಯಕ್ಕೆ ಪೂರಕವಾಗುವುದರ ಜೊತೆಗೆ, ಜನ ಸಾಮಾನ್ಯರಿಗೆ ಸುಲಭ ರೀತಿಯಲ್ಲಿ ಸಿಗುವಂತೆ ಮಾಡಿದ್ದು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯ ಶ್ಲಾಘನೀಯವಾಗಿದೆ. ಇಂತಹ ವ್ಯವಸ್ಥೆ ಸಹಕಾರಿಗಳ ಮುಖಾಂತರ ನೀಡುತ್ತಿರುವುದರಿಂದ ಚಿಕ್ಕ ಚಿಕ್ಕ ಸಹಕಾರಿ ಸಂಸ್ಥೆಗಳ ಆದಾಯದಲ್ಲಿ ಹೆಚ್ಚಳವಾಗಲು ಸಹಕಾರಿಯಾಗಿದೆ ಆದ್ದರಿಂದ ಎಲ್ಲ ಸಿಬ್ಬಂದಿಗಳು ಪ್ರಾಮಾಣಿಕ ಹಾಗೂ ನಿಷ್ಠೆಯಿಂದ ಕಾರ್ಯ ನಿರ್ವಹಿಸುವುದರ ಮುಖಾಂತರ ಸಹಕಾರಿಗಳ ಬೆಳವಣಿಗೆಗೆ ಪೂರಕವಾಗೋಣ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಧಾರವಾಡ ಜಿಲ್ಲೆಯ ನಿರ್ದೇಶಕರಾದ ಶ್ರೀ ರವಿ ಯಲಿಗಾರರವರು ವಹಿಸಿದ್ದರು. ವೇದಿಕೆಯ ಮೇಲೆ ಹಿರಿಯ ಸಹಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಗದಗ ಜಿಲ್ಲಾ ನಿರ್ದೇಶಕರಾದ ಶ್ರೀ ಆರ್.ಎನ್. ದೇಶಪಾಂಡೆ, ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರು ಹಾಗೂ ಇ-ಸ್ಟಾಂಪಿಂಗ್ ನೋಡಲ್ ಅಧಿಕಾರಿಗಳಾದ ಶ್ರೀಮತಿ ಕೃತಿ ಜನಾರ್ಧನ್, ಸ್ಟಾಕ್ ಹೊಲ್ಡಿಂಗ್ ಅಧಿಕಾರಿಗಳಾದ ಗುರುರಾಜ ಹಾಗೂ ಶ್ರೀ ಅಮೀತ ಕುಮಾರ ಹಾಗೂ ಶ್ರೀ ಸುಧಾಕರರವರು ಉಪಸ್ಥಿತರಿದ್ದರು. ಬೆಳಗ್ಗೆಯಿಂದ ಸಂಜೆವರೆಗೆ ನಡೆದ ಕಾರ್ಯಾಗಾರದಲ್ಲಿ ಕಲಂಗಳ ಬಗ್ಗೆ, ಸ್ಟಾಕ್ ಹೋಲ್ಡಿಂಗ್ ಸೌಲಭ್ಯಗಳ ಬಗ್ಗೆ ಹಾಗು ದಿನನಿತ್ಯ ಆಗುತ್ತಿರುವ ಕುಂದುಕೊರತೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಸ್ವಾಗತವನ್ನು ಸಂಯುಕ್ತ ಸಹಕಾರಿಯ ಶ್ರೀ ಮನೋಹರ ಎಂ.ಎನ್. ನಿರೂಪಣೆಯನ್ನು ಶ್ರೀ ಸೂರ್ಯಕಾಂತ ದ್ಯಾಖಲೇ, ವಂದನಾರ್ಪಣೆಯನ್ನು ಕು.ಕವಿತಾ ಆರ್. ನೆರವೇರಿಸಿದರು.

## ಇ-ಸ್ಟಾಂಪಿಂಗ್ ತರಬೇತಿ ಸೇವೆ ನೀಡುವುದರ ಜೊತೆಗೆ ಬಡ್ಡಿಯೇತರ ಆದಾಯ ಹೆಚ್ಚಿಸಿ ಲಾಭಗಳಿಸಿ : ಶ್ರೀ ಬಿ.ಎಸ್. ಸುಲ್ತಾನಪುರಿ



ಪ್ರತಿ ಸಹಕಾರಿಗಳೂ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಸೇವೆ ನೀಡುವುದರ ಜೊತೆಗೆ ಬಡ್ಡಿಯೇತರ ಮುಖಾಂತರ ಲಾಭಗಳಿಸುವುದರ ಮುಖಾಂತರ ಸಹಕಾರ ಕ್ಷೇತ್ರವನ್ನು ಬಲಪಡಿಸಬೇಕೆಂದು ಸಹಕಾರಿಗಳಿಗೆ ಕರೆ ನೀಡಿದರು.

ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ದಿನಾಂಕ 16/11/2013ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರು, ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪೂರ, ಗೋಕಾಕ್, ಬೈಲಹೊಂಗಲ, ಸವದತ್ತಿ, ರಾಮದುರ್ಗ ತಾಲೂಕಗಳ ಇ-ಸ್ಟಾಂಪಿಂಗ್ ಸಿಬ್ಬಂದಿಗಳಿಗಾಗಿ ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ದೇಶದಲ್ಲಿ ಮೊದಲ ಬಾರಿಗೆ ಸಹಕಾರ ಕ್ಷೇತ್ರದ ಮುಖಾಂತರ ಇ-ಸ್ಟಾಂಪ್ ನೀಡುವುದರ ಮೂಲಕ ಜನ ಸಾಮಾನ್ಯರಿಗೆ, ಒಳ್ಳೆಯ ಸೇವೆ ಒದಗಿಸುತ್ತಿದ್ದೇವೆ ಎಂದರು. ಇದರಿಂದಾಗಿ ಹಲವು ಸಹಕಾರಿಗಳ ಬಡ್ಡಿಯೇತರ ಆದಾಯದ ಹೆಚ್ಚಳವಾಗಿದೆ. ಇಂತಹ ಬಡ್ಡಿಯೇತರ ಆದಾಯದ ಕಡೆ ಗಮನ ಹರಿಸೋಣವೆಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡು ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ವಿಭಾಗದ ರಿಜಿನಲ್ ಮ್ಯಾನೇಜರ್‌ರಾದ ಶ್ರೀ ಜಿ.ಎಸ್. ಟೊಪಣ್ಣವರ ಮಾತನಾಡುತ್ತ ಕೇಂದ್ರ ಸರಕಾರವು ಸ್ಟಾಕ್ ಹೊಲ್ಡಿಂಗ್ ಕಾರ್ಪೋರೇಷನ್ ಇವರಿಗೆ ಇ-ಸ್ಟಾಂಪಿಂಗ್ ವ್ಯವಹಾರವನ್ನು ನಿರ್ವಹಿಸುವ ಜವಾಬ್ದಾರಿಯನ್ನು ವಹಿಸಿದ್ದು, ಅವರು ಸದರಿ ವ್ಯವಹಾರವನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಸಂಯುಕ್ತ ಸಹಕಾರಿಯು ರಾಜ್ಯ ಸರಕಾರದ ನೆರವಿನೊಂದಿಗೆ ಸ್ಟಾಕ್

12ನೇ ಪುಟಕ್ಕೆ...

## ಬಿಜಾಪುರದಲ್ಲಿ ಸಾಲ ವಸೂಲಾತಿ ಹಾಗೂ ದಾವಾದಾಖಲಾತಿ ತರಬೇತಿ

# ಸೌಹಾರ್ದ ಸಹಕಾರಿ ಯಶಸ್ಸಿನಿಂದಾಗಿ ಸಹಕಾರ ಕ್ಷೇತ್ರಕ್ಕೆ ಬಲ ಬಂದಿದೆ – ಶ್ರೀ ಎಂ.ಜಿ.ಪಾಟೀಲ

ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳ ಯಶಸ್ವಿ ಬೆಳವಣಿಗೆಯಿಂದಾಗಿ ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡು ಸಹಕಾರ ಕ್ಷೇತ್ರಕ್ಕೆ ಬಲ ಬಂದಾಂತಾಗಿದೆ ಎಂದು ನಿವೃತ್ತ ಅಪರ ನಿಬಂಧಕರಾದ ಶ್ರೀ ಎಂ.ಜಿ.ಪಾಟೀಲ ಹರ್ಷ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಸಹಕಾರಿ ಯೂನಿಯನ್ ಸಭಾ ಭವನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬಿಜಾಪೂರು ಮತ್ತು ಬಾಗಲಕೋಟ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳಿಗಾಗಿ ಏರ್ಪಡಿಸಿದ್ದ ಸುಸ್ಥಿ ಸಾಲ ಬಾಕಿಗಳ ಮೇಲೆ ದಾವಾ ದಾಖಲಾತಿ ಹಾಗೂ ವಸೂಲಾತಿ ಕ್ರಮಗಳ ತರಬೇತಿ ಕಾರ್ಯಾಗಾರದ ಉದ್ಘಾಟನೆಯನ್ನು ಇಲಾಖೆಯ ನಿವೃತ್ತ ಅಪರ ನಿಬಂಧಕರಾದ ಶ್ರೀ ಎಂ.ಜಿ. ಪಾಟೀಲ್ ದೀಪ ಪ್ರಜ್ವಲಿಸಿ ಮಾತನಾಡುತ್ತ ಕೇವಲ ಒಂದು ದಶಕದ ಅವಧಿಯಲ್ಲಿ ಸೌಹಾರ್ದ ಕಾಯ್ದೆ ಜಾರಿಗೆ ಬರುವ ಮುಖಾಂತರ ಈ ಚಳುವಳಿಗೆ ಸಧೃಡತೆ ತುಂಬಿದೆ. ಸಂಯುಕ್ತ ಸಹಕಾರಿಯ ನಿರಂತರ ತರಬೇತಿಯಿಂದಾಗಿ ದಿನನಿತ್ಯ ಹೊಸ ಸೌಹಾರ್ದ ಸಹಕಾರಿಗಳು ರಾಜ್ಯದಲ್ಲಿ ನೋಂದಣಿ ಹೊಂದುವುದರ ಮುಖಾಂತರ ರಾಷ್ಟ್ರೀಕೃತ ಬ್ಯಾಂಕುಗಳನ್ನು ಮುಟ್ಟದಂತಹ ಜನ ಸಾಮಾನ್ಯರ ಸೇವೆಯನ್ನು ಒದಗಿಸುತ್ತಿರುವುದು ಸಹಕಾರದ ಮೇಲೆ ಅಭಿಮಾನ ಹೊಂದಿದ ಗಾಂಧಿಜಿ ಮತ್ತು ನೆಹರುರವರ ಆಶಯ ಇಡೇರಿಸುತ್ತಿರುವುದರಿಂದ ಜನ ಸಾಮಾನ್ಯರ ಜೀವನ ಮಟ್ಟ ಸುಧಾರಣೆಯಾಗುತ್ತಿದೆ ಎಂದರು.

ಈ ಉದ್ಘಾಟನಾ ಕಾರ್ಯಕ್ರಮದ ವೇದಿಕೆ ಮೇಲೆ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಎನ್.ಎಸ್.ಹಣಗಿ ಜಿಲ್ಲಾ ಸಹಕಾರಿ ಯೂನಿಯನಿನ ಅಧ್ಯಕ್ಷರಾದ ಶ್ರೀ ಎಸ್.ಸಿ.ಸಂಗನಗೌಡರ, ಸಿಂಡಿಕೇಟ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಅಮರನಾಥ ಬಿರಾದಾರ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಿದ್ದೇಶ್ವರ ಕ್ರೆಡಿಟ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ, ಹಿರಿಯರಾದ ಶ್ರೀ ಎಸ್.ಜಿ.ಉಪ್ಪಿನ ವಹಿಸಿದರು.

# ಸಾಲ ವಸೂಲಾತಿ ವಿಷಯದಲ್ಲಿ ಹೆಚ್ಚಿನ ಗಮನ ಹರಿಸಬೇಕು : ಶ್ರೀ ಗುರುನಾಥ ಜ್ಯಾಂತಿಕರ



ಸೌಹಾರ್ದ ಸಹಕಾರಿ ಸಂಸ್ಥೆಗಳ ಹಿತ ಚಿಂತನೆಯಲ್ಲಿ ಸಾಲ ವಸೂಲಾತಿ ಅವಶ್ಯಕವಾಗಿದ್ದು, ಸಂಸ್ಥೆಗಳು ಸಾಲ ನೀಡುವಾಗ ಸಾಲ ಪಡೆದ ವ್ಯಕ್ತಿಯ ಹಿನ್ನಲೆಯನ್ನು ಅರಿತುಕೊಂಡು ಸೂಕ್ತ ದಾಖಲೆಗಳನ್ನು ಪಡೆದುಕೊಂಡು ಸಾಲ ನೀಡಲು ಮುಂದೆ ಬರಬೇಕು ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ರಾಜ್ಯ ಅಧ್ಯಕ್ಷರು ಶ್ರೀ ಗುರುನಾಥ ಜ್ಯಾಂತಿಕರ ಹೇಳಿದರು.

ಚಿಕ್ಕೋಡಿಯ ಶಾಂತಪ್ಪಣ್ಣ ಮಿರ್ಜಿ ಬ್ಯಾಂಕಿನ ಸಭಾಭವನದಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಕರಿಗಾಗಿ "ಸುಸ್ಥಿ ಸಾಲಗಳ ಮೇಲೆ ದಾವಾ ದಾಖಲಾತಿ ಹಾಗೂ ಸುಸ್ಥಿ ಸಾಲಗಳ ವಸೂಲಾತಿ ಕ್ರಮಗಳ" ಕುರಿತು ತರಬೇತಿ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಯಾವುದೇ ಜನಪ್ರತಿನಿಧಿಗಳ ಹಾಗೂ ಮೇಲಾಧಿಕಾರಿಗಳ ಮುಲಾಜಿಗಳ ಮೇಲೆ ಸಹಕಾರಿ ಸಂಸ್ಥೆಗಳು ಕೆಲ ವ್ಯಕ್ತಿಗಳಿಗೆ ಸಾಲ ನೀಡುವದನ್ನು ಕಡಿಮೆ ಮಾಡಬೇಕು. ಸಕಾಲದಲ್ಲಿ ಸಾಲವನ್ನು ಮರುಪಾವತಿ ಮಾಡುವವರಿಗೆ ಹೆಚ್ಚಿನ ಸಾಲ ನೀಡವಲ್ಲಿ ಸಹಕಾರಿ ಸಂಸ್ಥೆಗಳು ಮುಂದು ಬರಬೇಕು ಎಂದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ರಾಜ್ಯ ಉಪಾಧ್ಯಕ್ಷ ಹೆಚ್.ವಿ. ರಾಜೀವ ಮಾತನಾಡಿ, ಇಂದಿನ ಖಾಸಗೀಕರಣದ ಮಧ್ಯೆ ಸಹಕಾರಿ ಸಂಸ್ಥೆಗಳು ಸಹಕಾರಿ ಚಳುವಳಿ ಮಾಡುವ ಮೂಲಕ ಗ್ರಾಹಕರ ವಿವಿಧ ಅನುಕೂಲಕ್ಕಾಗಿ ಸಾಲ ನೀಡುತ್ತಿರುವ ಕಾರ್ಯ ನಿಜಕ್ಕೂ ಶ್ಲಾಘನೀಯವಾಗಿದೆ ಎಂದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ, ರಾಯಬಾಗ ಹಾಗೂ ಹುಕ್ಕೇರಿ ತಾಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಕರು ತರಬೇತಿಗೆ ಹಾಜರಿದ್ದರು.

...11ನೇ ಪುಟದಿಂದ

ಹೊಲ್ಡಿಂಗ್ ಜೊತೆಗೆ ಒಪ್ಪಂದ ಮಾಡಿಕೊಂಡು ಇ–ಸ್ಟಾಂಪಿಂಗ್ ವ್ಯವಹಾರವನ್ನು ಸೌಹಾರ್ದ ಸಹಕಾರಿಗಳ ಮುಖಾಂತರ ಇಂದು ರಾಜ್ಯದಲ್ಲಿ 550 ಕ್ಕಿಂತ ಅಧಿಕ ಕೇಂದ್ರಗಳು ಸಾರ್ವಜನಿಕರಿಗೆ ಸೌಲಭ್ಯ ಒದಗಿಸಿದೆ. ತಾಂತ್ರಿಕ ಮಾಧ್ಯಮದ ಮುಖಾಂತರ ಸ್ಟಾಂಪ್ ಮಾರಾಟದ ವ್ಯವಹಾರವನ್ನು ಸರಕಾರದವರು ಪ್ರಾರಂಭಿಸಿದರಿಂದ ಸ್ಟಾಂಪ್ ಸೇಲ್ ವ್ಯವಹಾರದಲ್ಲಿ ಪಾರದರ್ಶಕತೆ ನಿರ್ಮಾಣವಾಗಿದೆ. ಇದರಿಂದಾಗಿ ಸರಕಾರದ ಆದಾಯವು ನಿಯಮಿತವಾಗಿ ಬೆಳೆಯುತ್ತಿದೆ, ಸಾರ್ವಜನಿಕರಿಗೆ ತಮ್ಮ ತಮ್ಮ ಸ್ಥಳಗಳಲ್ಲಿ ಸ್ಟಾಂಪ್‌ಗಳು ಯಾವುದೇ ತೊಂದರೆವಿಲ್ಲದೆ ದೊರಕುತ್ತಿವೆ ಎಂದರು.

ಒಂದು ದಿನ ನಡೆದ ಈ ಕಾರ್ಯಾಗಾರದ ಬೆಳಗಿನ ಅವಧಿಯ ಉಪನ್ಯಾಸವನ್ನು ಸ್ಟಾಕ್ ಹೊಲ್ಡಿಂಗ್ ಅಧಿಕಾರಗಳಾದ ಶ್ರೀ ಗುರುರಾಜ ಹಾಗೂ ಶ್ರೀ ಅಮಿತರವರು ಇ–ಸ್ಟಾಂಪಿಂಗ್ ಸೌಲಭ್ಯಗಳು ಹಾಗೂ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ನೋಡಲ್ ಅಧಿಕಾರಿ ಶ್ರೀಮತಿ ಕೃತಿ ಜನಾರ್ಧನರವರು ವ್ಯವಹಾರದಲ್ಲಿ ಎದುರಿಸುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಮಾಹಿತಿ ಒದಗಿಸಿದರು ಈ ಸಂದರ್ಭದಲ್ಲಿ ನೂರಾರು ಸಿಬ್ಬಂದಿಗಳು ಹಾಜರಿದ್ದು ಲಾಭವನ್ನು ಪಡೆದುಕೊಂಡರು.

# ಸೌಹಾರ್ದ ಸಹಕಾರಿ ಕಾಯ್ದೆ ಮಾದರಿ ಕಾಯ್ದೆಯಾಗಿದೆ – ಗುರುನಾಥ ಜ್ಯಾಂತಿಕರ



ಸೌಹಾರ್ದ ಕಾಯ್ದೆಯು ದೇಶದಲ್ಲಿಯೇ ಒಂದು ಮಾದರಿ ಕಾಯ್ದೆಯಾಗಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಅಭಿಪ್ರಾಯ ಪಟ್ಟರು. ದಿನಾಂಕ : 12–11–2013ರಂದು ನಗರದ ಶಿವನಾಥ ರವಳನಾಥ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಕುಮಟಾ, ಅಂಕೋಲಾ, ಹೊನ್ನಾವರ ಹಾಗೂ ಭಟ್ಕಳ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಕಾರ್ಯಾಗಾರ ಹಾಗೂ ಸೌಹಾರ್ದ ಸಹಕಾರಿಗಳ ಅವಲೋಕನ ಸಭೆಯನ್ನು ದೀಪ ಪ್ರಜ್ವಲಿಸುವುದರ ಮುಖಾಂತರ ಉದ್ಘಾಟಿಸಿ ಮಾತನಾಡಿದರು. ಸೌಹಾರ್ದ ಕಾಯ್ದೆ ಜಾರಿಗೆ ಬಂದು ಒಂದು ದಶಕದ ಒಳಗೆ ಸಹಕಾರ ಕ್ಷೇತ್ರದಲ್ಲಿ ಬಹಳಷ್ಟು ಜಾಗೃತ ಆಗಿದ್ದರಿಂದ 2,500 ಕ್ಕಿಂತ ಅಧಿಕ ಸೌಹಾರ್ದ ಸಹಕಾರಿಗಳು, ರಾಜ್ಯಾದ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಾ ಹಿಂದುಳಿದ ಪ್ರದೇಶದ ಗ್ರಾಮದ ಜನ ಸಾಮಾನ್ಯರಿಗೂ ಸಹ ಉತ್ತಮ ಸೇವೆಯನ್ನು ಒದಗಿಸುವುದರ ಮುಖಾಂತರ ಅವರ ಆರ್ಥಿಕತೆಯಲ್ಲಿ ಸುಧಾರಣೆಯಾಗಿದೆ. ಹೀಗಾಗಿ ಶತಮಾನಕ್ಕಿಂತ ಅಧಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಕ್ಷೇತ್ರಕ್ಕೆ ಬಲ ತುಂಬಿದೆ. ಇದರಿಂದಾಗಿ ವಿವಿಧ ರೀತಿಯ ಸೌಹಾರ್ದ ಸಹಕಾರಿಗಳು ಪ್ರಾರಂಭವಾಗುತ್ತಿವೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಮಾತನಾಡುತ್ತಾ, ಸಂಯುಕ್ತ ಸಹಕಾರಿಯು ನೀಡುತ್ತಿರುವ ತರಬೇತಿ ಹಾಗೂ ಕಾರ್ಯಕ್ರಮದಿಂದ ಸಹಕಾರ ಜಾಗೃತಗೊಂಡಿದೆ. ಇದರಿಂದಾಗಿ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಹಾಜರಾಗುವ ಸದಸ್ಯರ ಸಂಖ್ಯೆ ಹೆಚ್ಚಳ ಕಂಡು ಬರುತ್ತಿದೆ ಎಂದರು.

ಸೌಹಾರ್ದ ಸಹಕಾರಿಗಳಲ್ಲಿ ಬಾಕಿ ಉಳಿದಿರುವ ಸುಸ್ಥಿ ದಾವೆಗಳು ತ್ವರಿತಗತಿಯಲ್ಲಿ ವಿಚಾರಣೆಗೊಳಿಸುವುದಕೋಸ್ಕರ ರಾಜ್ಯದಲ್ಲಿ ಎರಡು ಸೌಹಾರ್ದ ನ್ಯಾಯಾಲಯಗಳು ಪ್ರಾರಂಭಿಸುವಂತೆ ಸರಕಾರದ ಮೇಲೆ ಒತ್ತಡ ತರಲಾಗುತ್ತಿದ್ದು, ಅದು ಕೆಲ ದಿನಗಳಲ್ಲಿ ಯಶಸ್ವಿಹೊಂದುವ ಹಂತದಲ್ಲಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯಲ್ಲಿ ಕ.ರಾ.ಸೌ. ಸಂಯುಕ್ತ ಸಹಕಾರಿ ನಿ., ಬೆಂಗಳೂರಿನ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆರವರು ವಹಿಸಿದ್ದರು. ವೇದಿಕೆಯ ಮೇಲೆ ಸೈಂಟ್ ಮಿಲಾಗ್ರಿಸ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ರೋಜಲಿನ್ ಜಾರ್ಜ್ ಫರ್ನಾಂಡಿಸ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಾರ್ಜ್ ಫರ್ನಾಂಡಿಸ್ ಉಪಸ್ಥಿತರಿದ್ದರು.

ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಬಗ್ಗೆ ಉಪನ್ಯಾಸವನ್ನು ಸಹಕಾರ ಸಂಘಗಳ, ಇಲಾಖೆ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್. ಪರಶಿವಮೂರ್ತಿ ವಿವರವಾದ ಉಪನ್ಯಾಸದವನ್ನು ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಅವಲೋಕನ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ಉಪಾಧ್ಯಕ್ಷ ಶ್ರೀ ಹೆಚ್.ವಿ. ರಾಜೀವ್ ಹಾಗೂ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿಯವರು ನೆರವೇರಿಸಿದರು. ಐದು ತಾಲ್ಲೂಕುಗಳ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.



ಧಾರವಾಡ ಅರ್ಬನ್ ಸೌಹಾರ್ದ ಸಹಕಾರಿಯ ಬೆಟಗೇರಿ ಗದಗ ಶಾಖೆ ಉದ್ಘಾಟನಾ ಸಮಾರಂಭದಲ್ಲಿ ಪ.ಪೂ.ಶ್ರೀ ಅಭಿನವ ಬೂದೀಶ್ವರ ಮಹಾಸ್ವಾಮಿ ಗದಗ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ್ ಹಾಗೂ ಶ್ರೀ ಗೋವರ್ಧನ, ಶ್ರೀ ಆರ್. ಎನ್. ದೇಶಪಾಂಡೆ, ಅಧ್ಯಕ್ಷರು ಶ್ರೀ ಚಂದ್ರಕಾಂತ್ ಪಡಚಣ್ಣವರು ಮತ್ತಿತರರು ಭಾಗವಹಿಸಿದ್ದರು.

# ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ

ಡಿಸೆಂಬರ್ ಮಾಹೆಯಲ್ಲಿ ರಾಜ್ಯದ 26 ಕೇಂದ್ರಗಳಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಯನ್ನು ವ್ಯವಸ್ಥೆಮಾಡಲಾಗಿದೆ. ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಕಡ್ಡಾಯವಾಗಿ ತಮಗೆ ಸೂಚಿಸಿದ ಸ್ಥಳ ಹಾಗು ದಿನಾಂಕದಂದು ಹಾಜರಾಗತಕ್ಕದ್ದು. ಭಾಗವಹಿಸಲು ಅನಾನುಕೂಲವಿದ್ದಲ್ಲಿ ಸಹಕಾರಿಯ ಒಬ್ಬ ಅಧಿಕಾರಿಯನ್ನು ಕಳುಹಿಸಬೇಕು. ಅಥವಾ ನಿಮಗೆ ಅನುಕೂಲವಾಗುವ ಇನ್ನೊಂದು ದಿನಾಂಕದ ಸಭೆಯಲ್ಲಿ ಸೂಚಿಸಿದ ಸ್ಥಳದಲ್ಲಿ ಹಾಜರಾಗಬೇಕು.ವಿವಿಧ ದಿನಾಂಕ ಹಾಗೂ ಸ್ಥಳಗಳ ವಿವರಗಳು ಈ ರೀತಿ ಇವೆ.

**ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು– 2013. ವಿವರಗಳು**

| ಕ್ರ. ಸಂ. | ದಿನಾಂಕ | ಭಾಗವಹಿಸಬೇಕಾದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು | ಸ್ಥಳ |
|---|---|---|---|
| 1 | 11.12.13 | BGU-001 ರಿಂದ BGU-130 ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ. | ಪ್ರಾದೇಶಿಕ ಆಡಳಿತ ನಿರ್ವಹಣಾ ಸಂಸ್ಥೆ, (RICM) ಪದ್ಮನಾಭನಗರ, ಬೆಂಗಳೂರು |
| | | ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆ. | ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು. |
| | | ಬೆಳಗಾವಿ ತಾಲೂಕಿನ(ಬಿಜಿಎಮ್–01 ರಿಂದ ಬಿಜಿಎಮ್–599ವರೆಗಿನ) | ಕನ್ನಡ ಸಾಹಿತ್ಯ ಭವನ ಚೆನ್ನಮ್ಮಾ ಸರ್ಕಲ್ ಹತ್ತಿರ ಬೆಳಗಾವಿ |
| | | ಗುಲ್ಬರ್ಗಾ ಯಾದಗಿರಿ ಜಿಲ್ಲೆಗಳು | ಹೆಚ್.ಕೆ.ಸಿ.ಸಿ. ಬಿಲ್ಡಿಂಗ್ ಎಸ್.ಎಸ್. ಪಾಟೀಲ ಆಡಿಟೋರಿಯಮ್, ಗುಲ್ಬರ್ಗ. |
| 2 | 12.12.13 | BGU-131 ರಿಂದ BGU-236, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲೆ | ಪ್ರಾದೇಶಿಕ ಆಡಳಿತ ನಿರ್ವಹಣಾ ಸಂಸ್ಥೆ, (RICM) ಪದ್ಮನಾಭನಗರ, ಬೆಂಗಳೂರು |
| | | ಖಾನಾಪೂರ, ಬೈಲಹೊಂಗಲ, ರಾಮ ದುರ್ಗಾ, ಸವದತ್ತಿ, ಬೆಳಗಾವಿ ತಾಲೂಕಿನ (ಬಿಜಿಎಂ–600 ರಿಂದ ಬಿಜಿಎಮ್–734ವರೆಗಿನ) | ಕನ್ನಡ ಸಾಹಿತ್ಯ ಭವನ ಚೆನ್ನಮ್ಮಾ ಸರ್ಕಲ್ ಹತ್ತಿರ ಬೆಳಗಾವಿ |
| 3 | 13.12.13 | ಗೋಕಾಕ್ | ನೇಮಿನಾಥ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಗುರುವಾರ ಪೇಟ್ ಗೋಕಾಕ್ |
| | | ಬೀದರ್ | ಹೋಟೆಲ್ ಸ್ವಪ್ನ ರೆಸಿಡೆನ್ಸಿ, ಬೀದರ್. |
| 4 | 16.12.13 | ಬಿಜಾಪೂರ | ಜಿಲ್ಲಾ ಸಹಕಾರಿ ಯೂನಿಯನ್ ಸಭಾಭವನ ಬಸ್ಸ ಸ್ಟ್ಯಾಂಡ ಎದರುಗಡೆ ಬಿಜಾಪೂರ |
| 5 | 17.12.13 | ತುಮಕೂರು ಜಿಲ್ಲೆ | ಸೆಕ್ರೆಡ್ ಹಾರ್ಟ್ ಸೌಹಾರ್ದ ಸಹಕಾರಿ ನಿ., ಹೊರಪೇಟೆ ಮುಖ್ಯರಸ್ತೆ, ತುಮಕೂರು |
| | | ಬ.ಬಾಗೇವಾಡಿ, ಮುದ್ದೆಬಿಹಾಳ, ಸಿಂದಗಿ, ಇಂಡಿ. | ಜಿಲ್ಲಾ ಸಹಕಾರಿ ಯೂನಿಯನ್ ಸಭಾಭವನ ಬಸ್ಸ ಸ್ಟ್ಯಾಂಡ್ ಮುಂದೆ ಬಿಜಾಪೂರ |
| | | ಉಡುಪಿ ಜಿಲ್ಲೆ | ಉಡುಪಿ ತಾಲ್ಲೂಕು ಇಂಡಸ್ಟ್ರೀಯಲ್ ಕೋ–ಆಪರೇಟಿವ್ ಸೋಸೈಟಿ ಸಭಾಭವನ, ಕಿನ್ನಿಮೊಲ್ಕಿ, ಉಡುಪಿ. |
| 6 | 18.12.13 | ಚಿತ್ರದುರ್ಗ ಜಿಲ್ಲೆ | ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಜೆಸಿಆರ್ ಎಕ್ಸ್‌ಟನ್ಷನ್ ಶಾಖೆ, ಚಿತ್ರದುರ್ಗ |
| | | ಮಂಗಳೂರು ಜಿಲ್ಲೆ | ಕ್ಯಾಪ್ಕೋ ಲಿಮಿಟೆಡ್, ವಾರಣಾಸಿ ಟವರ್ಸ್, ಮಿಷನ್ ಸ್ಟ್ರೀಟ್, ಮಂಗಳೂರು. |
| | | ಬಾಗಲಕೋಟ | ಬಾಗಲಕೋಟ ಡಿ.ಸಿ.ಸಿ ಬ್ಯಾಂಕ ಸಭಾಂಗಣ ನವನಗರ ಬಾಗಲಕೋಟ |
| 7 | 19.12.13 | ದಾವಣಗೆರೆ ಜಿಲ್ಲೆ | ನ್ಯೂ ಅಪೂರ್ವ ಹೋಟೇಲ್, ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ |
| 8 | 20.12.13 | ಅಥಣಿ, ಚಿಕ್ಕೋಡಿ, ರಾಯಭಾಗ | ಹುಲಿಗೆಮ್ಮಾ ಹೋಟಲ ಬಸವೇಶ್ವರ ಸರ್ಕಲ ಹತ್ತಿರ ಚಿಕ್ಕೋಡಿ ಜಿ॥ ಬೆಳಗಾವಿ. |
| | | ಬಳ್ಳಾರಿ, ಹೊಸಪೇಟೆ. | ಬಳ್ಳಾರಿ ಜಿಲ್ಲಾ ಸಹಕಾರಿ ಯೂನಿಯನ್, ನೆಹರು ಕಾಲೋನಿ, ಹೊಸಪೇಟೆ. |
| 9 | 21.12.13 | ಹುಕ್ಕೇರಿ | ಶಂಕರಲಿಂಗ ಕಲ್ಯಾಣ ಮಂಟಪ್ಪ ಹಳೆ ಪಿ.ಬಿ.ರಸ್ತೆ ಸಂಕೇಶ್ವರ ತಾ॥ ಹುಕ್ಕೇರಿ ಜಿ॥ ಬೆಳಗಾವಿ |
| | | ಕೊಪ್ಪಳ ಗಂಗಾವತಿ | ಹೋಟೆಲ್ ಲಲಿತ ಮಹಲ್, ಆನೆಗೊಂದಿ ರಸ್ತೆ, ಗಂಗಾವತಿ. |
| 10 | 23.12.13 | ಉತ್ತರ ಕನ್ನಡ | ಟಿ.ಎ.ಪಿ.ಸಿ.ಎಂ.ಎಸ್ ನ್ಯೂ ಮಾರ್ಕೆಟ ಯಾರ್ಡ, ಮೇನ್ ರಸ್ತೆ ಶಿರಸಿ |
| | | ರಾಯಚೂರು ಸಿಂಧೂನೂರು | ಹೋಟೆಲ್ ಲಕ್ಷ್ಮೀ ರೆಸಿಡೆನ್ಸಿ, ಸಿಂಧನೂರು. |
| 11 | 24.12.13 | ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆ | ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬಾಲರಾಜ ಅರಸ್ ರಸ್ತೆ, ಶಿವಮೊಗ್ಗ |
| | | ಗದಗ, ಹಾವೇರಿ, ಧಾರವಾಡ | ಸ್ವರ್ಣ ಗಾರ್ಡನ್, ಕುಸುಗಲ್ ರಸ್ತೆ, ಮಧುರ ಕಾಲೋನಿ ಎದುರಿಗೆ, ಕೇಶ್ವಪೂರ, ಹುಬ್ಬಳ್ಳಿ |

# ಕತ್ತಲ ಕಳೆದು ಬದುಕು ಬೆಳಗಿದ ಸೌರ ಶಕ್ತಿ

▸▸ **ರಘುನಂದನ ಕೆ.,** ಸಹಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ., ಬೆಂಗಳೂರು.



ಬೆಳಕನ್ನು ಪಸರಿಸಲು ಹಲವು ದಾರಿ, ಹಣತೆ ಹಚ್ಚುವ ಕೆಲಸ ಇವರು ಮಾಡಿದ್ದಾರೆ. ಕನ್ನಡಿ ಹಿಡಿವ ಕೆಲಸ ನಮ್ಮದು. ಈಗಷ್ಟೆ ಬೆಳಕಿನ ಹಬ್ಬ ದೀಪಾವಳಿಯನ್ನು ಮುಗಿಸಿ ಬದುಕನ್ನು ಬೆಳಕಾಗಿಸಿಕೊಳ್ಳುವ ಪ್ರಯತ್ನವನ್ನ ನಾವೆಲ್ಲ ಮುಂದುವರೆಸಿದ್ದೇವೆ. ಆದರೆ ಭಾರತದ ಗ್ರಾಮೀಣ ಭಾಗದ ಎಷ್ಟೋ ಹಳ್ಳಿಗಳಲ್ಲಿ ಇರುಳ ಕತ್ತಲ ಕಳೆದು ಬದುಕನ್ನು ಬೆಳಗಲು ವಿದ್ಯುತ್ ಇಲ್ಲ. ವಿದ್ಯುತ್ ಕೇಂದ್ರಿತ ಜಗತ್ತಿನಲ್ಲಿ ಜಲ ಹಾಗೂ ಅಣು ವಿದ್ಯುತ್‌ನಂತಹ ಹೊಸ ಯೋಜನೆಗಳಲ್ಲಿ ಜನರ ಬದುಕು ಕತ್ತಲೆಯೆಡೆಗೆ ಸರಿಯುತ್ತಿದ್ದರೂ ಸಾಕೆನಿಸುವಷ್ಟು ವಿದ್ಯುತ್ ದೊರೆಯದೆ ಎಷ್ಟೋ ಗ್ರಾಮೀಣ ಭಾಗದ ಮನೆಗಳು ಕತ್ತಲಲ್ಲೇ ಇವೆ. ಸರ್ಕಾರವೇ ಎಲ್ಲವನ್ನೂ ಮಾಡಲಿ ಎಂದು ಕಾದು ಕುಳಿತರೆ 'ಸಹಕಾರ'ದ ಸಾರ್ಥಕತೆಯೇನು? ಅಲ್ಲೊಂದು ಇಲ್ಲೊಂದು ಹೊಸ ಪ್ರಯತ್ನಗಳು ಕತ್ತಲಿಂದ ಬೆಳಕಿನಡೆಗೆ ಜನರನ್ನ ನಡೆಸಲು ಪ್ರಯತ್ನಿಸುತ್ತಿವೆ. ಇಂತಹ ಪ್ರಯತ್ನವೊಂದರ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಈ ಲೇಖನ.

1992ರಲ್ಲಿ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಬೆಳಕನ್ನು ತಲುಪಿಸುವ ಉದ್ದೇಶದಿಂದ ಸಂಚರಿಸುತ್ತಿದ್ದ ಐ.ಐ.ಟಿ ಪದವಿದರನಿಗೆ 65 ವರ್ಷದ ವೃದ್ದೆಯೊಬ್ಬಳು ಮಾತಿಗೆ ಸಿಕ್ಕು ಕೇಳಿದಳು. 'ಮಗಾ, ನಾನು ಸಾಯೋದರೊಳಗೆ ಬೆಳಕು ಕೊಡೋದಕ್ಕೆ ನಿನ್ನಿಂದ ಸಾಧ್ಯವಾ?' ಸ್ವಾತಂತ್ರ್ಯ ಸಿಕ್ಕು 50 ವರ್ಷಗಳ ನಂತರವೂ ನಾವು ಈ ಪ್ರಶ್ನೆ ಎದುರಿಸಲಾಗದೆ ಸ್ಥಿತಿಯಲ್ಲಿದ್ದೇವೆಯೇ? ಭಾರತದ ಅರ್ಧ ಜನರು ವಿದ್ಯುತ್ ಇಲ್ಲದೇ ಬದುಕುತ್ತಿದ್ದಾರೆ. ಇವತ್ತಿಗೂ ದೇಶದ 50 ಕೋಟಿ ಜನರಿಗೆ ವಿದ್ಯುತ್ ಇಲ್ಲ ಮತ್ತು ನಾವು ಶೇ. 8-9 ಅಭಿವೃದ್ಧಿಯ ದರದ ಬಗ್ಗೆ ಮಾತಾಡುತ್ತಿದ್ದೇವೆ. ಹೀಗನ್ನಿಸಿದ ಕ್ಷಣದಿಂದ ಆ ಪದವೀದರ ಬೆಳಕು ಕೊಡುವ ಯೋಜನೆಯನ್ನು ರೂಪಿಸಿದ, ಆ ಯೋಜನೆ ಇಂದು ಬೆಳೆದು 'ಸೆಲ್ಕೊ' ಎಂಬ ಕಂಪನಿಯಾಗಿ ರೂಪಗೊಂಡಿದೆ. ಮುದುಕಿಯಿಂದ ಪ್ರಶ್ನೆ ಎದುರಿಸಿದ ಆ ಪದವೀಧರ ಹೇಳುತ್ತಾರೆ – ನನಗೆ ಪ್ರಶ್ನೆ ಕೇಳಿದ ಆ ಮುದುಕಿ ಅವಳ ಜೀವಮಾನದಲ್ಲೇ ವಿದ್ಯುತ್ ಬಲ್ಬ್ ನೋಡಿರಲಿಲ್ಲ. ತನ್ನ ಮನೆಯಲ್ಲಿ ಬೆಳಕು ತುಂಬಿಕೊಳ್ಳಲು ಅವಳು ಹಣ ಕೊಡುವುದಕ್ಕೆ ಸಿದ್ಧವಿದ್ದಳು. ನಾವು ನಮ್ಮಷ್ಟಕ್ಕೆ ಒಂದು ನಿರ್ಧಾರಕ್ಕೆ ಬಂದುಬಿಟ್ಟಿದ್ದೇವೆ. ಅದೇನೆಂದರೆ ಬಡವರು ಬಿಲ್ ಕಟ್ಟಲು ಶಕ್ತರಲ್ಲ, ಅವರಿಗೆ ತಂತ್ರಜ್ಞಾನ ಭರಿಸುವ ಶಕ್ತಿಯಿಲ್ಲ, ಅವರನ್ನು ದೃಷ್ಟಿಯಲ್ಲಿರಿಸಿಕೊಂಡು ವಾಣಿಜ್ಯ ಉದ್ದಿಮೆ ಆರಂಭಿಸಿದರೆ ಸೋಲಬೇಕಾಗುತ್ತದೆ. ಈ ಕಾರಣಕ್ಕಾಗಿ ಬಡವರಿಗೆ ರೂಪಿಸುವ ಯೋಜನೆಯೆಂದರೆ ಅಲ್ಲಿ ಸೋವಿ ಉತ್ಪನ್ನಗಳೇ ಇರಬೇಕು ಅಂದುಕೊಳ್ಳುತ್ತೇವೆ. ಇದು ತಪ್ಪು ಎಂದು 'ಸೆಲ್ಕೊ' ಸಾಧಿಸಿ ತೋರಿಸಿದೆ.



**ಬೆಳಕು ಮೂಡುವ ಮೊದಲು :** ಕತ್ತಲೆ ತುಂಬಿದ ಮನೆಗಳಿಗೆ ಬೆಳಕು ನೀಡುವ ಯೋಜನೆಯನ್ನ ರೂಪಿಸಿ ಗೆಲ್ಲಿಸಿದ ಭಾರತದ ಸೌರಶಕ್ತಿ ಪ್ರವರ್ತಕ, ಮ್ಯಾಗ್ಗೆಸ್ಸೆ ಪ್ರಶಸ್ತಿ ಪುರಸ್ಕೃತ ಡಾ. ಹರೀಶ್ ಹಂದೆ, ಮೂಲತಃ ಉಡುಪಿ ಜಿಲ್ಲೆಯ ಕೋಟದವರಾದ ಇವರು, ಐಐಟಿ ಪದವಿ ಮುಗಿಸಿ ಪಿಎಚ್‌ಡಿ ಮಾಡಲೆಂದು ಅಮೆರಿಕಕ್ಕೆ ಹೋದವರು. ಅಲ್ಲಿದ್ದಾಗ 1991ರಲ್ಲಿ ಡಾಮಿನಿಕ್ ಗಣರಾಜ್ಯಕ್ಕೆ ಹೋಗುವ ಅವಕಾಶ ಲಭಿಸಿತು. ಅಲ್ಲಿ ರಿಚರ್ಡ್ ಹನ್ಸೆನ್ ಸಿಕ್ಕರು, ಅವರು ಬಡವರ ಮನೆಗಳಿಗೆ ಸೋಲಾರ್ ವಿದ್ಯುತ್ ನೀಡುತ್ತಿದ್ದರು. ಅಂದಿನಿಂದ ಇವರ ಯೋಚನೆ ಪರ್ಯಾಯ ಶಕ್ತಿ ಮೂಲಗಳ ಸಾಮಾಜಿಕ ಆರ್ಥಿಕ ಪರಿಣಾಮಗಳೆಡೆಗೆ ಹರಿಯಿತು. 'ಭಾರತದಲ್ಲಿ ಗ್ರಾಮೀಣ ವಿದ್ಯುದೀಕರಣ' ಎಂಬ ಹೊಸ ವಿಷಯವನ್ನು ಪಿ.ಎಚ್‌ಡಿಗೆ ಆರಿಸಿಕೊಂಡರು. ಅವರೇ ಹೇಳುವಂತೆ ಭಾರತಕ್ಕೆ ಬರಲು ಅವರಿಗೆ ಹಿಂಜರಿಕೆಯಿತ್ತು, ಐಐಟಿ ಪದವೀಧರ ಎನ್ನುವುದು ಅಡ್ಡಬರುತ್ತಿತ್ತು. ಹಾಗಾಗಿ ಭಾರತಕ್ಕೆ ಮೊದಲು ಶ್ರೀಲಂಕಾಕ್ಕೆ ಹೋದರು. ದೇಶ, ಭಾಷೆ ಗೊತ್ತಿಲ್ಲದ ನಾಡಿನಲ್ಲಿ ಮೂಕ ಭಾಷೆಯೊಂದಿಗೆ 1992ರಲ್ಲಿ ಶ್ರೀಲಂಕಾದ ಎಲ್‌ಟಿಟಿಇ ಉಗ್ರರ ನೆಲೆ ಹತ್ತಿರದ ಅನುರಾಧಪುರಕ್ಕೆ

ಹೋದರು. ಅಲ್ಲೊಬ್ಬ ವ್ಯಕ್ತಿ ಆನೆ ಓಡಿಸಲು ಬೆಳಕು ಬಳಸುವ ಚಿಂತನೆ ನಡೆಸಿದ್ದ, ಅವನ ಜೊತೆ ಸೇರಿ ಕಬ್ಬಿನ ಗದ್ದೆಗಳಲ್ಲಿ ಸೋಲಾರ್ ದೀಪವನ್ನು ಅಳವಡಿಸಿ ಆನೆಗಳನ್ನು ದೂರವಿಡುವ ಯೋಜನೆ ಹಾಕಿ ಯಶಸ್ವಿಯಾದರು. ನಂತರ ತಾಯ್ನೆಲವಾದ ಕರ್ನಾಟಕಕ್ಕೆ ಬಂದರು. ಇಲ್ಲಿನ ಹಳ್ಳಿಗಳನ್ನು, ಸಮಸ್ಯೆಗಳನ್ನು ತಿಳಿದುಕೊಂಡರು.

**'ಸೆಲ್ಕೊ' ಬೆಳಗಿದ ಬಗೆ :**

ಸೌರಶಕ್ತಿಯ ಬಗ್ಗೆ 90ರ ದಶಕದಲ್ಲಿ ಭಾರತದಲ್ಲಿ ತಿಳುವಳಿಕೆ ಕಡಿಮೆಯಿತ್ತು. ಅಂತಹ ಸಂದರ್ಭದಲ್ಲಿ ಜಗತ್ತಿನ ಸೌರ ಶಕ್ತಿಯ ಹರಿಕಾರನೆಂದೇ ಖ್ಯಾತರಾದ ನೆವಿಲ್ಲೆ ವಿಲಿಯಮ್ಸ್ ಮಾರ್ಗದರ್ಶನದಲ್ಲಿ ಕೇವಲ 1000/– ರೂ ಬಂಡವಾಳದೊಂದಿಗೆ 1993ರಲ್ಲಿ ಸೆಲ್ಕೊ ಆರಂಭವಾಯಿತು. ಇವತ್ತು 170 ಜನ ಕೆಲಸ ಮಾಡುತ್ತಿದ್ದಾರೆ, 1,20,000 ಮನೆಗಳಿಗೆ ಬೆಳಕು ನೀಡಲಾಗಿದೆ. ಅವರೇನು ಅದನ್ನು ಪುಕ್ಕಟೆ ಪಡೆದಿಲ್ಲ, ಎಲ್ಲರೂ ಹಣ ನೀಡಿದ್ದಾರೆ. ಆರಂಭದಲ್ಲಿ ಅದಕ್ಕೆ ಸರ್ಕಾರದ ಸಬ್ಸಿಡಿ ಕೂಡ ಸಿಗುತ್ತಿರಲಿಲ್ಲ. ತಿಂಗಳಿಗೆ ರೂ.1600/–ಗಳಿಸುವವರು ಕೂಡ ಇದನ್ನು ಸುಲಭವಾಗಿ ಹೊಂದಿದ್ದಾರೆ. ಈ ಬೆಳಗುವ ಹಾದಿ ಸುಲಭದ್ದಲ್ಲ. ಸೋಲಾರ್ ದೀಪದ ಯೋಜನೆಯಿಂದ ಆದಾಯವಿಲ್ಲ ಎಂದು ಬ್ಯಾಂಕುಗಳು ಸಾಲ ನೀಡಲು ಒಪ್ಪುತ್ತಿರಲಿಲ್ಲ. ಬ್ಯಾಂಕುಗಳ ಮನವೊಲಿಸಲು ಇವರಿಗೆ ನಾಲ್ಕು ವರ್ಷಗಳೇ ಬೇಕಾಯಿತು. ಈಗ ಒಂಬತ್ತು ಗ್ರಾಮೀಣ ಮತ್ತು ಪ್ರಾದೇಶಿಕ ಬ್ಯಾಂಕುಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಸುಲಭ ಕಂತಿನಲ್ಲಿ ಪಾವತಿಸುವಂತೆ, ಬ್ಯಾಂಕುಗಳ ಮೂಲಕ ಸಾಲ ಕೊಡಿಸುವ ವ್ಯವಸ್ಥೆಯನ್ನು ಕೂಡ ಸೆಲ್ಕೊ ಮಾಡುತ್ತಿದೆ. ಕರ್ನಾಟಕದಲ್ಲಿ 'ಸೆಲ್ಕೊ'ದ 28 ಕೇಂದ್ರಗಳಿವೆ. ಎಂಟು ವರ್ಷಗಳ ನಂತರ ಈ ಬೆಳಗುವ ಯೋಜನೆ ಉತ್ತರ ಪ್ರದೇಶದಲ್ಲೂ ಸಾಧ್ಯವಾಗಿದೆ. ಪ್ರಸ್ತುತ 'ಸೆಲ್ಕೊ' ಗುಜರಾತು ಹಾಗೂ ಕೇರಳಗಳಲ್ಲಿ ಕೂಡ ಬೆಳಕು ಪಸರಿಸುತ್ತಿದೆ.

ಡಾ. ಹರೀಶ್ ಹಂದೆ ಇವರ ಕಾರ್ಯಕ್ಕೆ 2011ರ ರಾಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿ ದೊರಕಿದೆ. 'ವಾಸ್ತವವಾಗಿ ನಾವಿಂದು ಬಡವರ ಆಯ್ಕೆಗಳನ್ನೇ ಕಿತ್ತುಕೊಳ್ಳುತ್ತಿದ್ದೇವೆ, ನಾವು ಅವರೊಂದಿಗೆ ಕುಳಿತು ಅವರಿಗೇನು ಬೇಕು ಎಂಬುದನ್ನು ಚರ್ಚಿಸುತ್ತಿಲ್ಲ, ಜನರ ಅಗತ್ಯಗಳ ಬಗ್ಗೆ ನಾವು ಮಾತಾಡುತ್ತೇವೆಯೇ ಹೊರತು ಅನಿವಾರ್ಯತೆಗಳ ಬಗ್ಗೆಯಲ್ಲ' ಎನ್ನುವ ಇವರು ಗ್ರಾಮೀಣ ಪ್ರದೇಶದ ಜನರ ಮೂಲಭೂತ ಸೌಕರ್ಯಗಳಿಗಾಗಿ ಶ್ರಮಿಸುವುದೇ ನನ್ನ ಗುರಿ ಎಂದಿದ್ದಾರೆ. ಯಾವುದೇ ಸಾಧನೆಗಳು ಸುಲಭದಲ್ಲಿ ಸಾಧ್ಯವಾಗುವುದಿಲ್ಲ. ನಿರಂತರ ಪರಿಶ್ರಮ ಹಾಗೂ ಮನೋಧೈರ್ಯ ಸಾಧಕರನ್ನು ರೂಪಿಸುತ್ತದೆ. ಇಂತಹ ಹಣತೆಗಳ ಸಂಖ್ಯೆ ಹೆಚ್ಚಲಿ.

ವಿದ್ಯುತ್ ಕಾಣದ ಹಳ್ಳಿಗಳಿಗೆ ಸೋಲಾರ್ ವಿದ್ಯುತ್ ನೀಡುವಲ್ಲಿ ಸೆಲ್ಕೊ ತಕ್ಕಮಟ್ಟಿಗೆ ಯಶಸ್ವಿಯಾಗಿದೆ. ಆದರೂ ಇದು ಸಾಲುತ್ತಿಲ್ಲ, ಇಂಧನ ಅಗತ್ಯ ಪೂರೈಸುವುದು ವಿಕೇಂದ್ರೀಕೃತ ವ್ಯವಸ್ಥೆಯಾಗಬೇಕಾದ್ದು ಅನಿವಾರ್ಯ. ಎಲ್ಲ ರೀತಿಯ ಮೂಲಗಳನ್ನು ಬಳಸಿ ಅದನ್ನು ಸಾಧಿಸಬೇಕಿದೆ. ಸಹಕಾರ ಸಂಸ್ಥೆಗಳು ಗಮನಹರಿಸಲೇ ಬೇಕಾದ ಅನೇಕ ಕ್ಷೇತ್ರಗಳಿವೆ. ಸಾಂಪ್ರದಾಯಿಕ ಕಾರ್ಯಚಟುವಟಿಕೆಗಳೊಂದಿಗೆ ವಾಣಿಜ್ಯಾತ್ಮಕ ಉನ್ನತಿಯ ಪೈಪೋಟಿಯ ಜೊತೆಗೆ ಸಾಮಾಜಿಕ ಕಳಕಳಿಯ ತತ್ವವನ್ನು ಮುನ್ನಲೆಗೆ ತರುವ ಪ್ರಯತ್ನವನ್ನು ಸಹಕಾರಿಗಳು ಮಾಡಬೇಕಿದೆ. ಅಲಕ್ಷಿತ ಕ್ಷೇತ್ರಗಳೆಡೆಗೆ ಗಮನಹರಿಸಿ, ಸರ್ಕಾರ ಮಾಡುತ್ತದೆಂದು ಕಾಯದೇ ಸಮಾಜವನ್ನು ಸಹಕಾರ ತತ್ವಗಳೊಂದಿಗೆ ಬೆಳಗುವ ಕಾರ್ಯವಾಗಬೇಕಿದೆ. ಸಮಾಜದ, ದೇಶದ ಆರ್ಥಿಕತೆಯನ್ನು ಬೆಳಗುವ ಹಣತೆಗಳಾಗಿ ವ್ಯಕ್ತಿಗಳು, ಸಂಸ್ಥೆಗಳು ರೂಪಗೊಳ್ಳುವಂತೆ ಸರ್ವರಲ್ಲೂ ದೀಪಾವಳಿಯ ಬೆಳಕು ಹೊಸ ವಿಚಾರಗಳ, ಚಿಂತನೆಗಳ ಅರಿವಿನ ಜ್ಯೋತಿಯನ್ನು ಜಾಗೃತವಾಗಿಸಲಿ ಎಂದು ಆಶಿಸುತ್ತೇವೆ. ■

## ಅಧ್ಯಕ್ಷರ ಡಿಸೆಂಬರ್ ತಿಂಗಳಿನ ಪ್ರವಾಸದ ವಿವರ



| | |
|---|---|
| 1 ರಿಂದ 5 ಡಿಸೆಂಬರ್‌ರವರೆಗೆ | ಬೆಳಗಾವಿ |
| 6 ಡಿಸೆಂಬರ್ | ಬೀದರ |
| 7 ಡಿಸೆಂಬರ್ | ಬೆಂಗಳೂರು |
| 8 ಮತ್ತು 9 ಡಿಸೆಂಬರ್ | ಗುಲ್ಬರ್ಗ |
| 10,11 ಮತ್ತು 12 ಡಿಸೆಂಬರ್ | ಬೆಂಗಳೂರು |
| 13 ಮತ್ತು 14 ಡಿಸೆಂಬರ್ | ಬೀದರ |
| 15 ಡಿಸೆಂಬರ್ | ಗುಲ್ಬರ್ಗ |
| 16 ಡಿಸೆಂಬರ್ | ಬೀದರ |
| 17 ಮತ್ತು 18 ಡಿಸೆಂಬರ್ | ಗುಲ್ಬರ್ಗ |
| 19, 20, 21, 22, 23, 24, 25, 26, 27, 28 ಡಿಸೆಂಬರ್ | ಬೀದರ |
| 29 ಡಿಸೆಂಬರ್ | ಚಿತ್ರದುರ್ಗ |
| 30, 31 ಡಿಸೆಂಬರ್ | ಬೀದರ್ |

# ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ – ನಿರ್ಧರಿತ ಪ್ರಕರಣಗಳು ಮತ್ತು ಅವುಗಳ ವಿಶ್ಲೇಷಣೆ

▶▶ **ಶ್ರೀಕಾಂತ ಬರುವೆ,** ಸಹ ಪ್ರಧಾನ ವ್ಯವಸ್ಥಾಪಕರು.

ಇತ್ತೀಚಿನ ದಿನಗಳಲ್ಲಿ ಪತ್ತಿನ ಚಟುವಟಿಕೆ ನಡೆಸುತ್ತಿರುವ ಸೌಹಾರ್ದ ಸಹಕಾರಿಗಳ ಬಾಯಲ್ಲಿ ಕೇಳಿ ಬರುತ್ತಿರುವ ಮಾತು ಒಂದೆ ಸಹಕಾರಿಗೆ ಆದಾಯ ತೆರಿಗೆ ಇಲಾಖೆಯಿಂದ ತೆರಿಗೆ ಪಾವತಿಸುವಂತೆ ನೋಟೀಸ್ ಬಂದಿರುತ್ತದೆ ಏನು ಮಾಡಬೇಕು ದಯವಿಟ್ಟು ಸಲಹೆ ನೀಡಿ, ಮಾರ್ಗದರ್ಶನ ಮಾಡಿ ಎಂಬುದಾಗಿತ್ತು ಈ ಎಲ್ಲಾ ಪ್ರಶ್ನೆಗಳಿಗೆ ನಾವು ನೀಡುತ್ತಿದ್ದ ಉತ್ತರ ಆದಾಯ ತೆರಿಗೆ ಕಲಂ 80(ಪಿ)(2)(ಎ)(ಐ) ಅಡಿಯಲ್ಲಿ ಪತ್ತಿನ ಚಟುವಟಿಕೆ ನಡೆಸುವ ಸಹಕಾರಿಗೆ ಆದಾಯ ತೆರಿಗೆ ಅನ್ವಯಿಸುವುದಿಲ್ಲ ಆದ್ದರಿಂದ ಆದಾಯ ತೆರಿಗೆ ಪಾವತಿಸಬೇಕಾದ ಅವಶ್ಯಕತೆಯಿರುವುದಿಲ್ಲ ಈ ವಿಷಯವನ್ನು ಅಸೆಸಿಂಗ್ ಅಧಿಕಾರಿಗೆ ಮನವರಿಕೆ ಮಾಡಿಕೊಡಿ ಎಂದು ತಿಳಿಸಲಾಗುತ್ತಿತ್ತು. ಹೀಗೆ ತಿಳಿಸಿ ಕೆಲವು ದಿನಗಳ ನಂತರ ಮತ್ತೆ ಅದೇ ಸಹಕಾರಿಯಿಂದ ದೂರವಾಣಿ ಕರೆ, ನೀವು ತಿಳಿಸಿರುವಂತೆ ಅಸೆಸಿಂಗ್ ಅಧಿಕಾರಿಗೆ ಮನವರಿಕೆ ಮಾಡಿಕೊಡಲು ಪ್ರಯ್ನಿಸಿದೆವು ಆದರೆ ಅಸೆಸಿಂಗ್ ಅಧಿಕಾರಿ ನಮ್ಮ ಸಹಕಾರಿಯನ್ನು 'ಬ್ಯಾಂಕ್' ಎಂದು ಪರಿಗಣಿಸಿ ನಿಮ್ಮ ಸಹಕಾರಿಗೆ ತೆರಿಗೆ ಆದಾಯ ತೆರಿಗೆ ಕಲಂ 80(ಪಿ)(2)(ಎ)(ಐ) ವಿನಾಯಿತಿ ಅನ್ವಯಿಸುವುದಿಲ್ಲ ಆದ್ದರಿಂದ ಆದಾಯ ತೆರಿಗೆ ಪಾವತಿಸುವಂತೆ ತಿಳಿಸಿರುತ್ತಾರೆ ಎಂದು ತಿಳಿಸುತ್ತಾರೆ. ಇದು ಸಾಮಾನ್ಯವಾಗಿ ಸಂಭವಿಸುತ್ತಿರುವ ಘಟನಾವಳಿಗಳು. ಇಂತಹ ಅನುಭವ ನಿಮ್ಮ ಸಹಕಾರಿಗೂ ಸಹ ಆಗಿರಬಹುದು.

ಸಹೃದಯ ಸಹಕಾರಿಗಳೇ ಧೃತಿಗೆಡಬೇಕಿಲ್ಲ, ನಿರಾಶರಾಗಬೇಕಿಲ್ಲ, ಹೇದರಬೇಕಿಲ್ಲ ಕಾಯ್ದೆ, ಕಾನೂನುಗಳು ಇರುವುದು ತೊಂದರೆಯ ನಿವಾರಣೆಗೆ ಹೊರತು ತೊಂದರೆ ನೀಡುವುದಕ್ಕಲ್ಲ. ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ 'If any law is an evil, then can't be enforceable' ಸಹಕಾರಿಗಳಿಗೆ ಸಂತಸದಾಯಕವಾದ ಸುದ್ದಿಯೊಂದಿದೆ. ಶ್ರೀ ಜಸ್‌ಬೀರ್‌ಸಿಂಗ್ ಚೌಹಾಣ್, ಬೆಳಗಾವಿ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರು ಈ ಕೆಳಗಿನ ಪ್ರಕರಣಗಳಲ್ಲಿ ಸಹಕಾರಿಗಳ ಪರವಾಗಿ ನೀಡಿರುವ ತೀರ್ಪುಗಳು ಹಲವಾರು ಸೌಹಾರ್ದ ಸಹಕಾರಿಗಳ ಮುಂದಿನ ಹೋರಾಟಕ್ಕೆ ದಾರಿ ದೀಪವಾಗಿದೆ.

1. ದಿ ಯಮಕನಮರಡಿ ಲಕ್ಷ್ಮೀ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಯಮಕನಮರಡಿ (ITA No.97/BGM/12-13)
2. ಶ್ರೀ ಮಹಾವೀರ್ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ (ITA No.98/BGM/12-13)
3. ಶ್ರೀ ಬ್ರಹ್ಮದೇವ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಯಮಕನಮರಡಿ (ITA No.101/BGM/12-13)
4. ಶ್ರೀ ನಾಮದೇವ ಕೋ–ಆಫರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಸಂಕೇಶ್ವರ (ITA No.144/BGM/12-13)
5. ಶ್ರೀ ಮಹಾವೀರ ಕೋ–ಆಫರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಹುಕ್ಕೇರಿ (ITA No.147/BGM/12-13)
6. ಶ್ರೀ ಶಂಕರಲಿಂಗ ಕೋ–ಆಫರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಸಂಕೇಶ್ವರ (ITA No.151/BGM/12-13)




ಈ ಮೇಲಿನ ಎಲ್ಲಾ ತೀರ್ಪುಗಳನ್ನು ಬೆಳಗಾವಿಯ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರು ನೀಡಿದ್ದು, ಅವರು ತಮ್ಮ ತೀರ್ಪಿನಲ್ಲಿ ಸಹಕಾರಿಗಳು ಆದಾಯ ತೆರಿಗೆಯಿಂದ ಆದಾಯ ತೆರಿಗೆ ಕಲಂ 80(ಪಿ)(2)(ಎ)(ಐ) ರಡಿ ಹೇಗೆ ವಿನಾಯಿತಿ ಹೊಂದಿರುತ್ತವೆ ಎಂಬುದನ್ನು ತಿಳಿಸಿರುತ್ತಾರೆ (Ratio Decidendi). ಅದನ್ನು ನಾವು ಗಮನಿಸೋಣ.

ಮಾನ್ಯ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರ ತಿರ್ಪಿಗೂ ಪೂರ್ವದಲ್ಲಿ ತೀರ್ಪು ನೀಡಿದ್ದ ಅಸೆಸಿಂಗ್ ಅಧಿಕಾರಿ ಸಹಕಾರಿಗೆ ಆದಾಯ ತೆರಿಗೆ ಅನ್ವಯಿಸುತ್ತದೆ ಎಂಬುದಕ್ಕೆ ಈ ಕೆಳಗಿನ ಕಾರಣಗಳ ನೀಡಿರುತ್ತಾರೆ (The Assessing Officer had disallowed the deduction under section 80P (2)(a)(i) of the Income Tax Act, 1961 for below mentioned reasons)

1. 1. ಸಹಕಾರಿಯು ಬ್ಯಾಂಕಿಂಗ್ ಚಟುವಟಿಕೆಯಲ್ಲಿ ನಿರತವಾಗಿದ್ದು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ ಕಲಂ 5(ಛಿಛಿ) ರನ್ವಯ ಪ್ರಾಥಮಿಕ ಸಹಕಾರಿ ಬ್ಯಾಂಕ್ ಆಗಿರುತ್ತದೆ.

ವಿಶೇಷ ಲೇಖನ

2. ಸಹಕಾರಿಯು ಒಂದು ಲಕ್ಷಕ್ಕಿಂತ ಹೆಚ್ಚಿನ ಪಾವತಿಯಾದ ಶೇರು ಬಂಡವಾಳ ಹೊಂದಿರುವ ಸಹಕಾರಿಯು ತನ್ನಿಂತಾನೆ ಬ್ಯಾಂಕ್ ಆಗಿ ಪರಿವರ್ತನೆ ಹೊಂದುತ್ತದೆ.
3. ಆದಾಯ ತೆರಿಗೆ ಅಧಿನಿಯಮ,1961ರ ಕಲಂ 2(24)ರನ್ವಯ ಆದಾಯ ತೆರಿಗೆ ಕಲಂ 80(ಪಿ)(2)(ಎ)(ಐ)ಯಲ್ಲಿನ ವಿನಾಯಿತಿಯು ಕೇವಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿಗಳಿಗೆ ಮತ್ತು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿಗೆ ಮಾತ್ರ ಅನ್ವಯಿಸುತ್ತದಯೇ ಹೊರತು ಉಳಿದ ಸಹಕಾರಿಗಳಿಗಲ್ಲ.
4. ಪ್ರಾಥಮಿಕ ಸಹಕಾರಿಯು ಈ ಕೆಳಗಿನ ಪ್ರಮುಖ ಉದ್ದೇಶಗಳನ್ನು ಹೊಂದಿದ್ದು ಅದರ ಆಧಾರದ ಮೇಲೆ ಪ್ರಾಥಮಿಕ ಸಹಕಾರ ಬ್ಯಾಂಕ್ ಎಂದು ಪರಿಗಣಿಸಬೇಕಾಗುತ್ತದೆ, ಹಾಗೆ ಪ್ರಾಥಮಿಕ ಸಹಕಾರಿಯು ಸಹಕಾರ ಬ್ಯಾಂಕ್ ಎಂದು ಪರಿಗಣಿಸಲು ಕಾರನವಾಗುವ ಪ್ರಮುಖ ಅಂಶಗಳು;

a) ಬ್ಯಾಂಕಿಂಗ್ ಚಟುವಟಿಕೆ ನಡೆಸುವುದು ಪ್ರಮುಖ ಉದ್ದೇಶವಾಗಿರುವ
b) ಒಂದು ಲಕ್ಷಕ್ಕಿಂತ ಹೆಚ್ಚಿನ ಪಾವತಿಯಾದ ಶೇರು ಬಂಡವಾಳ ಹೊಂದಿರುವ
c) ಸಹಕಾರಿಯ ಉಪವಿಧಿಯು ಇನ್ನೊಂದು ಸಹಕಾರಿಯ ಸದಸ್ಯತ್ವ ಹೊಂದಲು ಅವಕಾಶವಿಲ್ಲದ

ಈ ಮೇಲಿನ ಕಾರಣಗಳಿಗಾಗಿ ಸಹಕಾರಿಗೆ ಆದಾಯ ತೆರಿಗೆ ಕಲಂ 80ಪಿ(2)(ಎ)(ಐ)ರಡಿ ವಿನಾಯಿತಿ ಇರುವುದಿಲ್ಲವೆಂದು ತೀರ್ಪನ್ನು ನೀಡಿರುತ್ತಾರೆ.

ಈ ತೀರ್ಪಿನ ವಿರುದ್ಧ ಬಾಧಿತ ವ್ಯಕ್ತಿಗಳು (ತೀರ್ಪು ಋಣಿಗಳು) ಮಾನ್ಯ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರಿಗೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯಲ್ಲಿ ತೀರ್ಪು ಋಣಿಗಳು ತಮ್ಮ ಸಮರ್ಥನೆಯನ್ನು ಸಲ್ಲಿಸಿದ್ದು ಮಾನ್ಯ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರು ಸದರಿ ವಾದವನ್ನು ಪುರಸ್ಕರಿಸಿ ಪತ್ತಿನ ಚಟುವಟಿಕೆ ನಡೆಸುತ್ತಿರುವ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2)(ಎ)(ಐ) ರಡಿ ವಿನಾಯಿತಿ ಹೊಂದಿರುತ್ತವೆ ಎಂದು ತೀರ್ಪನ್ನು ನೀಡಿರುತ್ತಾರೆ. ಈ ಪ್ರಕರಣದಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀಯುತ ಪಾಂಡುರಂಗ ಸಿಂಪಿಯವರು ಸಹಕಾರಿಗಳ ಪರವಾಗಿ ವಾದಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಸಹಕಾರಿಗಳು ಪಾಂಡುರಂಗ ಸಿಂಪಿಯವರನ್ನು ಸಂಪರ್ಕಿಸ ಬಹುದಾಗಿದ್ದು ಅವರ ದೂರವಾಣಿ ಸಂಖ್ಯೆ 9448142674 ಆಗಿರುತ್ತದೆ.

**ತೀರ್ಪಿನ ಪ್ರಮುಖ ಅಂಶಗಳು :**

1. ದಿನಾಂಕ 01.07.2007ರಿಂದ ಜಾರಿಗೆ ಬಂದಿರುವ ಆರ್ಥಿಕ ಅಧಿನಿಯಮ,2006ರ ಮೂಲಕ ಸಹಕಾರ ಬ್ಯಾಂಕುಗಳನ್ನು ಆದಾಯ ತೆರಿಗೆ ಪಾವತಿಯ ವ್ಯಾಪ್ತಿಯಲ್ಲಿ ತರಲಾಗಿರುತ್ತದೆ. ಕಲಂ 80ಪಿ(4)ನ್ನು ಹೊಸದಾಗಿ ಸೇರ್ಪಡೆ ಮಾಡುವ ಮೂಲ ಉದ್ದೇಶ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆದಾಯ ತೆರಿಗೆ ವಿಧಿಸುವುದಾಗಿರುತ್ತದೆ. ಇದರಿಂದ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಆದಾಯ ತೆರಿಗೆ ಅನ್ವಯವಾಗುವುದು ಮತ್ತು ಉಳಿದ ಸಹಕಾರಿಗಳು ಆದಾಯ ತೆರಿಗೆ ವಿನಾಯಿತಿ ಹೊಂದಿರುವುದು ಸ್ಪಷ್ಟವಾಗುತ್ತದೆ ಮತ್ತು ಪ್ರಾಥಮಿಕ ಸಹಕಾರಿಗಳನ್ನು ಆದಾಯ ತೆರಿಗೆ ವ್ಯಾಪ್ತಿಯಲ್ಲಿ ತರುವುದಿದ್ದರೆ ಕಲಂ 80ಪಿ(2)(ಎ)(ಐ) ಯನ್ನು ರದುಗೊಳಿಸಬಹುದಿತ್ತೆ ವಿನಃ ಕಲಂ 80ಪಿ(4)ನ್ನು ಹೊಸದಾಗಿ ಸೇರ್ಪಡೆಗೊಳಿಸುವ ಅವಶ್ಯಕತೆ ಇರಲಿಲ್ಲ. ಅಲ್ಲದೆ ಕಲಂ 80ಪಿ(4)ನ್ನು ಸೇರ್ಪಡೆಗೊಳಿಸುವಾಗಿನ ಕೇಂದ್ರ ಆರ್ಥಿಕ ಮಂತ್ರಿಗಳಾಗಿದ್ದ ಶ್ರೀಯುತ ಪಿ.ಚಿದಂಬರಂರವರು ಆಯ-ವ್ಯಯದ ಮೇಲಿನ ಭಾಷಣದಲ್ಲಿ ಕಲಂ 80ಪಿ(4)ಗಿನ ಸೇರ್ಪಡೆ ಕುರಿತು ಈ ಕೆಳಗಿನಂತೆ ಸಂಸತ್ತಿನಲ್ಲಿ ಭಾಷಣ ಮಾಡಿರುತ್ತಾರೆ;

Shri P. Chidambaram Sir, the next issue, on which there are some questions raised on Direct Taxes, is Section 80(P). Let me take a few minutes on dealing with this issue. We have not removed the exemption to co-operatives in general. We have only removed it for certain co-operative banks. All Co-operatives which are in dairy, weaving and in other co-operatives where the principle of mutuality applies continue to enjoy exemption under Section 80(P). We have removed exemption for one category of co-operative banks. Why? Today, there are 1,08,791 institutions which, do one form

> ದಿನಾಂಕ 01.07.2007ರಿಂದ ಜಾರಿಗೆ ಬಂದಿರುವ ಆರ್ಥಿಕ ಅಧಿನಿಯಮ, 2006ರ ಮೂಲಕ ಸಹಕಾರ ಬ್ಯಾಂಕುಗಳನ್ನು ಆದಾಯ ತೆರಿಗೆ ಪಾವತಿಯ ವ್ಯಾಪ್ತಿಯಲ್ಲಿ ತರಲಾಗಿರುತ್ತದೆ. ಕಲಂ 80ಪಿ(4)ನ್ನು ಹೊಸದಾಗಿ ಸೇರ್ಪಡೆ ಮಾಡುವ ಮೂಲ ಉದ್ದೇಶ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆದಾಯ ತೆರಿಗೆ ವಿಧಿಸುವುದಾಗಿರುತ್ತದೆ.

of banking or another. Out of these 1,08,791 institutions, 1,05,735 institutions are primary agricultural credit societies which are expressly exempt. Therefore, nobody should have any fear that there are being taxed. Then we have 768 Primary Co-operative Agricultural & Rural Development Banks which are also expressly exempt. These leave only 2,288 banks falling under four categories-urban Co-operative Banks, State Co-operative Banks, Central Co-operative Banks and State Co-operative Agricultural Rural Development Banks, that is banks at the Apex level and banks at the district level. These are 2,288 in number.

Sir, today Member after Member have met me and said that these banks are mismanaged; there is malfeasance and misfeasance; the monies of the depositors are not paid and they requested me to pay to the depositors out of the Credit Insurance Corporation. In Gujarat we have finally released Rs.1,00,000/- per depositor. Hundreds of Members have met me and said that the whole thing is in the hands of worst people in this country. Why? It is because they are not subjected to any kind of regulation. Today all that they have say is that they are banks and are covered under Section 80(P). They do not even file their income tax returns and audited statement of accounts. They are under State Regulators. Now, we all know that State Regulators have failed. In Gujarat, dozens of banks collapsed; In Maharashtra, dozens of banks have collapsed. In Madurai, the Urban City Bank has collapsed. In my own district, the DCCB is under moratorium by the Reserve Bank of India. Now, the only way we can bring in some discipline and save these Banks is to make them file proper audited income and expenditure statement which can be scrutinized by the Income Tax Department. Today out of the 2288 banks, which have now been brought under the Income Tax net, one half of them, are reporting losses and so they are not paying any income tax. They would pay tax only when they are working profits. But, I do not believe that one half of them are making losses. One half of them are reporting losses because nobody is questioning them, nobody is looking at them. Now let me say with humility, if we allow this situation continues, then all of them will one day make losses. We have to bring some discipline. They are banks and the principle of mutuality does not apply there because they are lending even to non-members. Public deposits are taken and they are lending to even non-members. What they do is that they take certain categories of members and call them nominal members. They take rupee one from them and begin to lend them. These banks are like any other banks.

Many of them are scheduled banks also because they are in the schedule to the RBI Act. We are bringing only these banks under taxation under Section 80(P). If you make a profit, please pay taxes. Whether you are making profit or not, I can find them only if you are required to file an audited income and expenditure statement. I think it is important step in order to bring some financial and management discipline into these Banks. I humbly appeal to the House to allow me to do this…

2. ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಅಧಿನಿಯಮವು ಅನ್ವಯವಾಗುವುದಿಲ್ಲವಾದ ಕಾರಣ ಮತ್ತು ಸಹಕಾರಿಯು ಬ್ಯಾಂಕಿಂಗ್ ಚಟುವಟಿಕೆ ನಡೆಸಲು ಪರವಾನಗಿ ಪಡೆದಿಲ್ಲದ ಕಾರಣ ಅಸೆಸಿಂಗ್ ಅಧಿಕಾರಿಯು ಅಭಿಪ್ರಾಯಪಟ್ಟಿರುವಂತೆ ಪ್ರಾಥಮಿಕ ಸಹಕಾರಿಯು 'ಬ್ಯಾಂಕ್' ಆಗಿರುವುದಿಲ್ಲ. ಅಲ್ಲದೆ ಯಾವುದನ್ನೆ ಆಗಲೀ ಬ್ಯಾಂಕ್ ಎಂದು ಪರಿಗಣಿಸಲು ಈ ಕೆಳಗಿನ ಮೂರು ಪ್ರಮುಖ ಅಂಶಗಳು ಅಗತ್ಯವಾಗಿದ್ದು ಅದರ ಹೊರತಾಗಿ ಬ್ಯಾಂಕ್ ಎಂದು ಪರಿಗಣಿಸಲು ಸಾಧ್ಯವಿರುವುದಿಲ್ಲ.

a) ಸಾರ್ವಜನಿಕರಿಂದ ಠೇವಣಿಯನ್ನು ಸಾಲ ಮತ್ತು ಹೂಡಿಕೆಯ ಉದ್ದೇಶಕ್ಕಾಗಿ ಸ್ವೀಕರಿಸಿರುವ;
b) ಸಾರ್ವಜನಿಕರ ಠೇವಣಿ ಹಣವನ್ನು ಕೇಳಿದಾಗ ಮರುಪಾವತಿಸುವ;
c) ಹಣವನ್ನು ಚೆಕ್, ಡ್ರಾಫ್ಟ್, ಆದೇಶ ಮತ್ತು ಇನ್ನ್ಯಾವುದರ ಮೂಲಕ ಪಡೆದುಕೊಳ್ಳು ಅವಕಾಶವಿದ್ದಲ್ಲಿ ಅದನ್ನು ಬ್ಯಾಂಕ್ ಎಂದು ಪರಿಗಣಿಸಬಹುದಾಗಿರುತ್ತದೆ. ಆದರೆ ಒಂದು ಪ್ರಾಥಮಿಕ ಸಹಕರಿ ಸಂದರ್ಭದಲ್ಲಿ ಮೇಲಿನ ಈ ಮೂರು ಅಂಶಗಳು ಸಾಧ್ಯವಿಲ್ಲದ ಕಾರಣ ಮತ್ತು ಕೇವಲ ಒಂದು ಲಕ್ಷ ರೂಪಾಯಿಗಳ ಪಾವತಿಯಾದ ಶೇರು ಬಂಡವಾಳ ಇದ್ದ ಮಾತ್ರಕ್ಕೆ ಸಹಕಾರಿಯನ್ನು ಬ್ಯಾಂಕ್ ಎಂದು ಪರಿಗಣಿಸಲು ಸಾಧ್ಯವಿರುವುದಿಲ್ಲ.

3. ಸಹಕಾರಿಯು ಇನ್ನೊಂದು ಸಹಕಾರಿಯನ್ನು ತನ್ನ ಸದಸ್ಯನಾಗಿ ಹೊಂದಲು ಅವಕಾಶವಿರುತ್ತದೆ. ಸಹಕಾರಿಯು ತನ್ನ ಉಪವಿಧಿಯಲ್ಲಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13.
RNI No. KARBIL - 2004/18001. Pages 20

'ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ವಾಸಿಸುವ ಅಥವಾ ವ್ಯವಹಾರ ಅಥವಾ ವ್ಯಾಪಾರವನ್ನು ಹೊಂದಿರುವ' ಎಂಬ ಶಬ್ದವು ಒಂದು ಸಹಕಾರಿಯು ಇನ್ನೊಂದು ಸಹಕಾರಿಯನ್ನು ಸದಸ್ಯನಾಗಿ ಹೊಂದಲು ಅವಕಾಶ ಕಲ್ಪಿಸುತ್ತದೆ.

ಈ ಮೇಲಿನ ಕಾರಣಗಳ ಆಧಾರದ ಮೇಲೆ ಸಹಕಾರಿಯು ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 80ಪಿ(2)(ಎ)(ಐ)ರಡಿಯಲ್ಲಿ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ ಹೊಂದಿರುತ್ತದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಆದಾಯ ತೆರಿಗೆ ಇಲಾಖೆಯ ಅಸೆಸಿಂಗ್ ಅಧಿಕಾರಿಗಳು ಪ್ರತಿಯೊಂದು ಸಹಕಾರಿಯ ಪ್ರಕರಣವು ಭಿನ್ನವೆಂದು ಪರಿಗಣಿಸಿ ಬೇರೆಯದೆ ಆದ ನಿರ್ವಚನ ಮಾಡಿ ಸಹಕಾರಿಗೆ ಆದಾಯ ತೆರಿಗೆ ವಿಧಿಸುತ್ತಿದ್ದಾರೆ. ಅಂತಹ ಸಂದರ್ಭಗಳಲ್ಲಿ ಸಹಕಾರಿಗಳು ಆದಾಯ ತೆರಿಗೆ ಪಾವತಿಸದೆ ಸಂಬಂಧಿಸಿದ ಪ್ರಾಧಿಕಾರದ ಮುಂದೆ ಪ್ರಕರಣವನ್ನು ದಾಖಲಿಸುವ ಮೂಲಕ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆಯಬಹುದಾಗಿರುತ್ತದೆ. ಪತ್ತಿನ ಚಟುವಟಿಕೆ ನಡೆಸುವ ಸಹಕಾರಿಗಳು ಆದಾಯ ತೆರಿಗೆ ಪಾವತಿಯ ವಿನಾಯಿತಿಯಿಂದ ಹೊಂದಿರುವ ಕುರಿತಂತೆ ನಿರ್ಧರಿತ ಪ್ರಕರಣಗಳು ಈ ಕೆಳಗಿನಂತಿದೆ.

1. The Assistant Comissioner of Income Tax Circle 391, Bangalore v/s Bangalore Commercial Transport (ITA No:1069/Bang/2010. (AY 2007-08)
2. Commissioner of Income Tax Circle Panaji v/s Dwaraka Souharda Credit Sahakari Ltd., 9ITA No.202/203/204/DCIT/cc Panaji/CIT(A)-VI/2010-11) (Assesment Year 2007-08, 2008-09 and 2009-10)
3. 3. ಯಶವಂತಪುರ ಕ್ರೆಡಿಟ್ ಕೋ–ಆಫರೇಟಿವ್ ಸೊಸೈಟಿ ಲಿ., (ITA No:737/Bang/2011) (Assesment Year 2007-08)
4. 4. ಜಯಲಕ್ಷ್ಮೀ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಅಂಕೋಲಾ (ITA No:01 to 03/PNJ/2012 dated 31.03.2012 Assesment Year 2007-08, 2008-09 and 2009-10)
5. 5. ದ್ವಾರಕ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಅಂಕೋಲಾ (ITA Nos:04 to 06/LNJ/2012 dated 31.03.2012 Assesment Year 2007-08, 2008-09 and 2009-10)

ಈ ಪ್ರಕರಣದಲ್ಲಿ ಸಹಕಾರಿಯ ಪರವಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀಯುತ ಸುಬ್ರಹ್ಮಣ್ಯ ಹೆಗಡೆಯವರು ವಾದಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಅವರ ದೂರವಾಣಿ ಸಂಖ್ಯೆ 9448136855 ಸಂಪರ್ಕಿಸಬಹುದಾಗಿರುತ್ತದೆ.

6. ಸಮರ್ಥ ಅರ್ಬನ್ ಕೋ–ಆಫರೇಟಿವ್ ಸೊಸೈಟಿ ಲಿ., ಬೆಳಗಾವಿ (ITA Nos:662/BGM/2010-11 dated 28.11.2011 Assesment Year 2008-09)
7. ಕೇರಳಾ ಕೋ–ಆಫರೇಟಿವ್ ಕಂಜ್ಯೂಮರ್ಸ್ ಫೇಡರೇಶನ್ ಲಿ., v/s CIT 170 ITR 455.
8. ಅಡಿಷನಲ್ ಸಿಐಟಿ v/s ಯುಪಿ ಕೋ–ಆಫರೇಟಿವ್ ಕೆನೆ ಯೂನಿಯನ್ 114 ಐಟಿಆರ್ 70
9. ಸಿಐಟಿ v/s ಕೋ–ಆಫರೇಟಿವ್ ಸಪ್ಲೈ ಅಂಡ್ ಕಮೀಷನ್ ಶಾಫ್ ಲಿ., 204 ಐಟಿಆರ್ 713.
10. Asistant Commissioner of Income tax, Circle iv V/S Buldana Urban Credit Society Ltd., (ITA Nos:151 to 153 and 179 to 181 (NAG) of 2012 dated 23.11.2012)
11. ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ–ಆಫರೇಟಿವ್ ಲಿ., (ITA. NO 71-73/AC-3(1)/CIT(A)-II/11-12) (Assesment Year 2007-08, 2008-09 and 2010-11) ಈ ಪ್ರಕರಣದಲ್ಲಿ ಸಹಕಾರಿಯ ಪರವಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀಯುತ ಮಧುಕರ ಹೆಗಡೆಯವರು ವಾದಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಅವರ ದೂರವಾಣಿ ಸಂಖ್ಯೆ 9448151454 ಸಂಪರ್ಕಿಸಬಹುದಾಗಿರುತ್ತದೆ.
12. ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೋರಗಾಂವ್ (ITA.NO 145/BGM/11-12) (Assesment Year 2009-10)

ಆದಾಯ ತೆರಿಗೆ ಇಲಾಖೆಯು ಸಹಕಾರಿಗಳಿಗೆ ಆದಾಯ ತೆರಿಗೆ ಪಾವತಿಗೆ ನೋಟೀಸ್ ನೀಡುತ್ತಿರುವುದರ ಕುರಿತು ಸಂಯುಕ್ತ ಸಹಕಾರಿಯು ಈಗಾಗಲೇ ಪರೋಕ್ಷವಾಗಿ ಕಾನೂನು ಸಮರವನ್ನು ನಡೆಸುತ್ತಿದೆ ಮತ್ತು ಸಂಬಂಧಪಟ್ಟ ಸಚಿವರಿಗೆ ಮತ್ತು ಪ್ರಾಧಿಕಾರಕ್ಕೆ ಪತ್ರವನ್ನೂ ಬರೆದಿರುತ್ತದೆ. ಅಲ್ಲದೆ ಆದಾಯ ತರಿಗೆ ಪ್ರಾಧಿಕಾರದ ಅಧಿಕಾರಿಗಳನ್ನೂ ಸಹ ಬೇಟಿ ಮಾಡಿ ಚರ್ಚಿಸಿರುತ್ತದೆ. ಸಹಕಾರಿಗಳು ಆದಾಯ ತೆರಿಗೆ ಪಾವತಿ ಕುರಿತಂತೆ ಯಾವುದೇ ನೋಟೀಸ್ ಬಂದಲ್ಲಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ. ಸಂಯುಕ್ತ ಸಹಕಾರಿಯು ಆದಾಯ ತೆರಿಗೆ ಕುರಿತಂತೆ ಅಗತ್ಯ ನೆರವು ನೀಡಲು ಸಿದ್ದವಿದ್ದು, ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ■

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜಿವರಾವ್ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010